# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಸೆಪ್ಟೆಂಬರ್ 04, 2022

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪುಟ : 49 ಸಂಚಿಕೆ : 112 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಶರಣರ ಪ್ರಕರಣಕ್ಕೆ ತಿರುವು

### ಸಂತ್ರಸ್ತ ಬಾಲಕಿ ಬಸವರಾಜನ್ ಮನೆಯಲ್ಲಿದ್ದುದಾಗಿ ಚಿಕ್ಕಪ್ಪನ ದೂರು

ಚಿತ್ರದುರ್ಗ, ಸೆ. 3 – ಮುರುಘಾ ಶರಣರ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣದಲ್ಲಿ ಹೊಸ ತಿರುವು ದೊರೆತಿದ್ದು, ಸಂತ್ರಸ್ತ ವಿದ್ಯಾರ್ಥಿನಿಯರ ಪೈಕಿ ಒಬ್ಬರು ಒಂದೂವರೆ ತಿಂಗಳಿನಿಂದ ಮುರುಘಾ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಅವರ ಮನೆಯಲ್ಲಿದ್ದರು ಎಂದು ವಿದ್ಯಾರ್ಥಿನಿಯ ಚಿಕ್ಕಪ್ಪ ದೂರು ನೀಡಿದ್ದಾರೆ.

ಚಿತ್ರದುರ್ಗ ಪೊಲೀಸ್ ಅಧೀಕ್ಷಕರಿಗೆ ದೂರು ನೀಡಿರುವ ಅವರು, ನನ್ನ ಅಣ್ಣನ ಮಗಳು ಒಂದೂವರೆ ತಿಂಗಳಿನಿಂದ ಬಸವರಾಜನ್ ಅವರ ಮನೆಯಲ್ಲೇ ಇದ್ದಾರೆ. ಅವರನ್ನು ನನ್ನ ಮನೆಗೆ ಕರೆದುಕೊಂಡು ಬಂದಿಲ್ಲ. ಆದರೂ, ನನ್ನ ಮನೆಯಲ್ಲಿ ಸಂತ್ರಸ್ತೆ ಇದ್ದುದಾಗಿ ಸುಳ್ಳು ಆರೋಪ ಮಾಡಲಾಗಿದೆ ಎಂದಿದ್ದಾರೆ.

ಈ ಬಗ್ಗೆ ಕೂಲಂಕುಶವಾದ ವಿಚಾರಣೆ ನಡೆಸಬೇಕು ಮತ್ತು ನನ್ನ ಅಣ್ಣನ ಮಗಳ ಜೊತೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ದೂರಿನಲ್ಲಿ ಕೇಳಲಾಗಿದೆ.

ನನಗೆ ಪರಿಚಯದ ಅಜ್ಜಪ್ಪ ಎಂಬುವವರು ಕಳೆದ 27.07.2022ರಂದು ನನ್ನ ಮನೆಗೆ ಬಂದು ಎಸ್.ಕೆ. ಬಸವರಾಜನ್ ಕರೆಯುತ್ತಿದ್ದಾರೆ ಎಂದು ತಿಳಿಸಿದರು. ಆಗ ಬಸವರಾಜನ್ ಮನೆಗೆ ಹೋದಾಗ ನನ್ನ ಅಣ್ಣನ ಮಗಳು ಹಾಗೂ ಇನ್ನೋರ್ವ ಹುಡುಗಿ ಅವರ ಮನೆಯಲ್ಲಿ ಇದ್ದದ್ದು ಕಂಡು ಬಂದಿತು.

ನಿಮ್ಮ ಮಗಳನ್ನು (ಅಣ್ಣನ ಮಗಳು) ಬೆಂಗಳೂರು ಪೊಲೀಸ್ ಠಾಣೆಯಿಂದ ಕರೆದುಕೊಂಡು ಬಂದಿದ್ದೇನೆ ಎಂದು ಹೇಳಿದರು. ಹೆಚ್ಚಿನ ವಿಷಯ ತಿಳಿಸದೇ, ಪೊಲೀಸ್ ವಿಷಯ ಎಂದಷ್ಟೇ ಹೇಳಿ ಪತ್ರವೊಂದಕ್ಕೆ ಸಹಿ ಮಾಡಿಸಿಕೊಂಡರು.

ನಂತರ ಅಣ್ಣನ ಮಗಳನ್ನು ಮನೆಗೆ ಬರುವಂತೆ ಕರೆದಾಗ ಅವರು ಒಪ್ಪಲಿಲ್ಲ. ಸೌಭಾಗ್ಯ ಬಸವರಾಜನ್ ಹಾಗೂ ಬಸವರಾಜನ್ (5ನೇ ಪುಟಕ್ಕೆ)

### ಶರಣರ ಪುರುಷತ್ವ ಪರೀಕ್ಷೆ, ವಿಚಾರಣೆ



ಬೆಂಗಳೂರು, ಆ. 3 - ಅಪ್ರಾಪ್ತ ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಚಿತ್ರದುರ್ಗದ ಮುರುಘಾ ಮಠದ ಶ್ರೀ ಶಿವಮೂರ್ತಿ ಸ್ವಾಮೀಜಿಗಳಿಗೆ ಪುರುಷತ್ವ ಪರೀಕ್ಷೆ ನಡೆಸಲಾಗಿದೆ.

ಪೊಲೀಸರು ಚಿತ್ರದುರ್ಗ ಜಿಲ್ಲಾಸ್ಪತ್ರೆಗೆ ಆರೋಪಿಯನ್ನು ಕರೆದೊಯ್ದಿದ್ದು, ಅಲ್ಲಿ ವೈದ್ಯರಾದ ವೇಣು ಅವರ ನೇತೃತ್ವದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಲಾಗಿದ್ದು ವರದಿಯಲ್ಲಿ ಪಾಸಿಟಿವ್ ಎಂದು ಬಂದಿದೆ. ಇನ್ನು ಪುರುಷತ್ವ ಪರೀಕ್ಷೆಯ ವರದಿ ಯನ್ನು ಸೋಮವಾರ ನ್ಯಾಯಾಲಯಕ್ಕೆ ಸಲ್ಲಿಕೆ (4ನೇ ಪುಟಕ್ಕೆ)

## ಬಿಜೆಪಿಗೆ ರಾಷ್ಟ್ರವಾದ, ಹಿಂದುತ್ವಗಳೇ ಆತ್ಮ

### ಎಸ್‌ಟಿ ಮೋರ್ಚಾದ ಪ್ರಶಿಕ್ಷಣ ವರ್ಗ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಿ.ಟಿ. ರವಿ



ದಾವಣಗೆರೆ, ಸೆ. 3 - ಕಾಂಗ್ರೆಸ್‌ಗೆ ಪರಿವಾರ ಆತ್ಮವಾದರೆ, ಜೆಡಿಎಸ್‌ಗೆ ಜಾತಿಯೇ ಆತ್ಮ. ಆದರೆ, ಬಿಜೆಪಿಗೆ ರಾಷ್ಟ್ರವಾದ ಹಾಗೂ ಹಿಂದುತ್ವಗಳೇ ಆತ್ಮ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ತಿಳಿಸಿದ್ದಾರೆ.

ಬಿಜೆಪಿ ಜಿಲ್ಲಾ ಎಸ್.ಟಿ. ಮೋರ್ಚ ವತಿಯಿಂದ ನಗರದ ಪೂಜಾ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ಆಯೋಜಿಲಾಗಿದ್ದ ಎಸ್.ಟಿ. ಮೋರ್ಚ ಪದಾಧಿಕಾರಿಗಳ ಮೂರು ದಿನಗಳ ಪ್ರಶಿಕ್ಷಣ ವರ್ಗ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

**ಪರಿವಾರವಿಲ್ಲದೇ ಕಾಂಗ್ರೆಸ್, ಜಾತಿಯಿಲ್ಲದೇ ಜೆಡಿಎಸ್‌ಗೆ ಅಸ್ತಿತ್ವ ಇಲ್ಲ**

ಪ್ರತಿಯೊಂದು ಪಕ್ಷಕ್ಕೂ ಒಂದೊಂದು ವಿಷಯ ಆತ್ಮದಂತೆ ಇರುತ್ತದೆ. ಗಾಂಧಿ ಪರಿವಾರವಿಲ್ಲದೇ ಕಾಂಗ್ರೆಸ್, ಜಾತಿ ಇಲ್ಲದೇ ಜೆಡಿಎಸ್ ಇರಲು ಸಾಧ್ಯವಿಲ್ಲ. ಆದರೆ, ಬಿಜೆಪಿಗೆ ರಾಷ್ಟ್ರವಾದ ಹಾಗೂ ಹಿಂದುತ್ವಗಳೇ ಆತ್ಮ. ನಾವು ಇವುಗಳಿಲ್ಲದೇ ಬದುಕಲು ಸಾಧ್ಯವಿಲ್ಲ ಎಂದು ರವಿ ಹೇಳಿದರು.

ಅದೇ ರೀತಿ ಪ್ರತಿಯೊಂದು ಪಕ್ಷಕ್ಕೂ ಮಾಲೀಕರಿರುತ್ತಾರೆ. ಕಾಂಗ್ರೆಸ್ ಪಕ್ಷಕ್ಕೆ ಒಂದು ಪರಿವಾರದವರು ಮಾಲೀಕರಾಗಿದ್ದಾರೆ. ಜೆಡಿಎಸ್‌ನಲ್ಲಿ ದೊಡ್ಡ ಗೌಡರು, ಸಣ್ಣ ಗೌಡರು, ಮರಿ ಗೌಡರು ಮಾಲೀಕರು. ಬಿಜೆಪಿಯಲ್ಲಿ ಮಾತ್ರ ಪ್ರತಿಯೊಬ್ಬ ಕಾರ್ಯಕರ್ತನೂ ಪಕ್ಷದ ಮಾಲೀಕ ಎಂದವರು ತಿಳಿಸಿದರು.

ಬಿಜೆಪಿಯು ನೀತಿ, ನೇತೃತ್ವ ಹಾಗೂ ನಿಯತ್ತಿನಿಂದ ಬೆಳೆಯುತ್ತಿದೆ. ಹಿಂದುತ್ವ, ವಿಕಾಸ, ಅಂತ್ಯೋದಯ, ಬಡತನ ನಿವಾರಣೆಗಳೇ ನಮ್ಮ ನೀತಿ. ಜಗತ್ತು ಗೌರವಿಸುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವ ನಮಗಿದೆ. ಡಿ.ಬಿ.ಟಿ. ಮೂಲಕ ಭ್ರಷ್ಟಾಚಾರವಿಲ್ಲದೇ ಜನರ ಹಣವನ್ನು ನೇರವಾಗಿ ಅವರ ಖಾತೆಗಳಿಗೆ ಜಮಾ ಮಾಡುವ (3ನೇ ಪುಟಕ್ಕೆ)

## ಭಾರತ್ ಜೋಡೋ ಅಲ್ಲ, ಕಾಂಗ್ರೆಸ್ ಜೋಡೋ

ದಾವಣಗೆರೆ, ಸೆ. 3 - ಕಾಂಗ್ರೆಸ್ ಪಕ್ಷ 'ಭಾರತ್ ಜೋಡೋ' ಪಾದಯಾತ್ರೆಗೆ ಮುಂದಾಗಿದ್ದರೆ, ಅದರ ಹಿರಿಯ ನಾಯಕರು ಮೊದಲು 'ಕಾಂಗ್ರೆಸ್ ಜೋಡೋ' ಮಾಡಿ ಎಂದು ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಲೇವಡಿ ಮಾಡಿದ್ದಾರೆ.

ಬಿಜೆಪಿಯ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ನಗರಕ್ಕೆ ಆಗಮಿಸಿದ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಭಾರತ್ ಜೋಡೋ ಕಾರ್ಯಕ್ರಮಕ್ಕೆ ಮುಂಚೆ

**ಜಾತಿ, ಪ್ರಾದೇಶಿಕತೆ, ಮತ ಬ್ಯಾಂಕ್ ಆಧಾರದ ಮೇಲೆ ದೇಶವನ್ನು ಒಡೆದ ಕಾಂಗ್ರೆಸ್‌ಗೆ ಭಾರತ್ ಜೋಡೋ ಎನ್ನುವ ನೈತಿಕತೆ ಇಲ್ಲ : ಸಿ.ಟಿ. ರವಿ**

ಕಾಂಗ್ರೆಸ್ ಜೋಡಿಸುವುದರಲ್ಲೇ ಅವರು ಯಶಸ್ಸು ಕಾಣುತ್ತಿಲ್ಲ ಎಂದರು. ನಾಲ್ಕೈದು ದಶಕಗಳ ಕಾಲ (3ನೇ ಪುಟಕ್ಕೆ)

## ಶ್ರೀಲಂಕಾಗೆ ಮರಳಿದ ರಾಜಪಕ್ಸ

ಕೊಲಂಬೊ, ಸೆ. 3 – ಶ್ರೀಲಂಕಾದ ಮಾಜಿ ಅಧ್ಯಕ್ಷ ಗೊಟಬಯ ರಾಜಪಕ್ಸ ಥೈಲ್ಯಾಂಡ್‌ನಿಂದ ಸ್ವದೇಶಕ್ಕೆ ಮರಳಿದ್ದಾರೆ. ಅವರಿಗೆ ವಿಶೇಷ ಭದ್ರತೆ ಹಾಗೂ ಸರ್ಕಾರಿ ಬಂಗಲೆ ಒದಗಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಂಕಾದಲ್ಲಿ ಆರ್ಥಿಕ ಸಂಕಷ್ಟ ಭುಗಿಲೆದ್ದ ನಂತರ ರಾಜಪಕ್ಷ ದೇಶ ಬಿಟ್ಟು ಹೋಗಿದ್ದರು. ವಾಪಸಾದ ಅವರಿಗೆ ಸಚಿವರು ಹಾಗೂ ರಾಜಕಾರಣಿಗಳು ವಿಮಾನ ನಿಲ್ದಾಣದಲ್ಲಿ ಆತ್ಮೀಯ ಸ್ವಾಗತ ನೀಡಿದ್ದಾರೆ.

## ಭಾರತ ಈಗ ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕ ವ್ಯವಸ್ಥೆ

ನವದೆಹಲಿ, ಸೆ. 3 – ಬ್ರಿಟನ್ ಹಿಂದೆ ಹಾಕಿರುವ ಭಾರತ, ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯಾಗಿ ಹೊರ ಹೊಮ್ಮಿದೆ. ಮೊದಲ ನಾಲ್ಕು ಸ್ಥಾನಗಳಲ್ಲಿ ಅಮೆರಿಕ, ಚೀನಾ, ಜಪಾನ್ ಹಾಗೂ ಜರ್ಮನಿಗಳಿವೆ ಎಂದು ಐ.ಎಂ.ಎಫ್. ವರದಿ ತಿಳಿಸಿದೆ.

ದಶಕದ ಹಿಂದೆ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಗಳ ಸಾಲಿನಲ್ಲಿ ಭಾರತ 11ನೇ ಸ್ಥಾನದಲ್ಲಿತ್ತು. ಆಗ ಬ್ರಿಟನ್ ಐದನೇ ಸ್ಥಾನದಲ್ಲಿತ್ತು.

ಏಪ್ರಿಲ್-ಜೂನ್ ಚತುರ್ಥದಲ್ಲಿ ದೇಶದ ಆರ್ಥಿಕತೆ ವಿಸ್ತರಣೆಯಾಗಿದ್ದು, ಬ್ರಿಟನ್ ಹಿಂದೆ ಹಾಕಿದೆ. ಬ್ರಿಟನ್ ಈಗ ಆರನೇ ಸ್ಥಾನಕ್ಕೆ ತಲುಪಿದೆ.

ಭಾರತದ ಆರ್ಥಿಕತೆಯ ಗಾತ್ರ ಈಗ 3.5 ಟ್ರಿಲಿಯನ್ ಡಾಲರ್ ಆಗಿದೆ. ಬ್ರಿಟನ್‌ನ ಆರ್ಥಿಕತೆಯ ಗಾತ್ರ 3.2 ಟ್ರಿಲಿಯನ್ ಡಾಲರ್ ಎಂದು ಅಂದಾಜಿಸಲಾಗಿದೆ.

ಆದರೆ, ಜನಸಂಖ್ಯೆ ಆಧಾರದಲ್ಲಿ ಉಭಯ ದೇಶಗಳಲ್ಲಿ ಅಜಗಜಾಂತರ ವ್ಯತ್ಯಾಸ ಇದೆ. ಭಾರತದ ತಲಾ ವರಮಾನ 2,500 ಡಾಲರ್ ಆಗಿದ್ದರೆ, ಬ್ರಿಟನ್ ತಲಾ ವರಮಾನ 47 ಸಾವಿರ ಡಾಲರ್ ಆಗಿದೆ. ಹೀಗಾಗಿ ನಾವು ಇನ್ನೂ ಸಾಕಷ್ಟು ದೂರ ಸಾಗಬೇಕಿದೆ. ಆ ದಾರಿಯಲ್ಲಿ ನಾವು ನಡೆಯೋಣ ಎಂದು ಕೋಟಕ್ ಮಹಿಂದ್ರ ಬ್ಯಾಂಕ್‌ನ ಸಿಇಒ ಉದಯ್ ಕೋಟಕ್ ತಿಳಿಸಿದ್ದಾರೆ.

## ಆಗಸ್ಟ್ ತಿಂಗಳಲ್ಲಿ ರಫ್ತು ಕುಸಿತ

ನವದೆಹಲಿ, ಸೆ. 3 – ಭಾರತದ ರಫ್ತು ಆಗಸ್ಟ್ ತಿಂಗಳಲ್ಲಿ ಶೇ.1.15ರಷ್ಟು ಕುಸಿತವಾಗಿದೆ. 20 ತಿಂಗಳ ನಂತರ ಮೊದಲ ಬಾರಿಗೆ ರಫ್ತು ಕುಸಿತವಾಗಿದೆ. ಇದೇ ತಿಂಗಳಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳದ ಕಾರಣದಿಂದಾಗಿ ವ್ಯಾಪಾರಿ ಕೊರತೆ 28.68 ಶತಕೋಟಿ ಡಾಲರ್‌ಗಳಿಗೆ ಹೆಚ್ಚಾಗಿದೆ.

ಕೇಂದ್ರ ವಾಣಿಜ್ಯ ಸಚಿವಾಲಯ ಬಿಡುಗಡೆ ಮಾಡಿರುವ ಪ್ರಾಥಮಿಕ ಮಾಹಿತಿಯ ಪ್ರಕಾರ, ಆಗಸ್ಟ್ ತಿಂಗಳಲ್ಲಿ ಆಮದು ಶೇ.37ರಷ್ಟು ಹೆಚ್ಚಾಗಿ 61.68 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಈ ತಿಂಗಳು ಕೊರತೆ 2 ಪಟ್ಟು ಹೆಚ್ಚಾಗಿದೆ.

## 6ಕ್ಕೆ ರಾಜ್ಯ ಸರ್ಕಾರಿ ನೌಕರರ ದಿನಾಚರಣೆ

ಬೆಂಗಳೂರು, ಸೆ. 3 - ಸೆಪ್ಟೆಂಬರ್ 6 ರಂದು ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯನ್ನು ಆಯೋಜಿಸಲಾಗಿದೆ. ಅಂತೆಯೇ, ಪ್ರಪ್ರಥಮ ಬಾರಿಗೆ ರಾಜ್ಯ ಸರ್ಕಾರದ ವತಿಯಿಂದ ಆಯೋಜಿಸಲಾಗಿರುವ ಈ ಕಾರ್ಯಕ್ರಮದ ಜೊತೆಗೆ ರಾಜ್ಯ ಸರ್ಕಾರಿ ಸೇವೆಯಲ್ಲಿ ಅನುಪಮ ಸೇವೆ ಸಲ್ಲಿಸಿ ಗಮನಾರ್ಹ ಸಾಧನೆ ಮಾಡಿರುವ 30 ಸರ್ಕಾರಿ ಅಧಿಕಾರಿ ಮತ್ತು ನೌಕರರಿಗೆ ಇದೇ ಸಂದರ್ಭದಲ್ಲಿ 2022 ನೇ ಸಾಲಿನ ರಾಜ್ಯ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆಡಳಿತ ಸುಧಾರಣಾ ವಿಭಾಗದ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀವತ್ಸ ಕೃಷ್ಣ ಅವರು ಪ್ರಕಟಿಸಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಹಯೋಗದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ

### 30 ನೌಕರರಿಗೆ ರಾಜ್ಯ ಮಟ್ಟದ ಸರ್ವೋತ್ತಮ ಪ್ರಶಸ್ತಿ

ಇಲಾಖೆ ಆಯೋಜಿಸಿರುವ ಈ ಎರಡೂ ಕಾರ್ಯಕ್ರಮಗಳನ್ನು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಲಿದ್ದಾರೆ. ಅಲ್ಲದೆ, ಈಗಾಗಲೇ ಆಯ್ಕೆಯಾಗಿರುವ ಸರ್ಕಾರಿ ಅಧಿಕಾರಿ ಮತ್ತು ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದವರು ಹೇಳಿದರು.

ರಾಜ್ಯ ಸಚಿವ ಸಂಪುಟದ ಸದಸ್ಯರು, ಸಂಸದರು, ಶಾಸಕರು, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರನ್ನು ಒಳಗೊಂಡಂತೆ ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳು, ಕರ್ನಾಟಕ ರಾಜ್ಯ (3ನೇ ಪುಟಕ್ಕೆ)

## ಮನೆಹಾನಿಗೆ ಪರಿಹಾರ ನೀಡಲು ಗಡುವು

### ಮಳೆಹಾನಿ ಕುರಿತ ಸಭೆಯಲ್ಲಿ ಅಧಿಕಾರಿಗಳಿಗೆ ಸಚಿವ ಬೈರತಿ ಎಚ್ಚರಿಕೆ



ದಾವಣಗೆರೆ, ಸೆ. 3 - ಮಳೆಯಿಂದ ಮನೆಗಳಿಗೆ ಆಗಿರುವ ಹಾನಿಗೆ ಮಂಗಳವಾರದ ಒಳಗೆ ಪರಿಹಾರ ವಿತರಿಸಬೇಕು. ಇಲ್ಲದಿದ್ದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಳೆ ಹಾನಿ ಕುರಿತು ಕರೆಯಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೊನ್ನಾಳಿ ತಾಲ್ಲೂಕಿನಲ್ಲಿ 541 ಹಾಗೂ ನ್ಯಾಮತಿ ತಾಲ್ಲೂಕಿನಲ್ಲಿ 524 ಮನೆಗಳಿಗೆ ಹಾನಿಯಾಗಿದೆ. ಆದರೆ, ಎರಡೂ ತಾಲ್ಲೂಕುಗಳಲ್ಲಿ ಸುಮಾರು 300 ಮನೆಗಳಿಗೆ ಇನ್ನೂ ಪರಿಹಾರ ನೀಡಬೇಕಿದೆ. ಪರಿಹಾರ ವಿಳಂಬವಾಗುತ್ತಿದೆ ಎಂದು ಸಚಿವರು ಆಕ್ಷೇಪಿಸಿದರು.

ಉಪವಿಭಾಗಾಧಿಕಾರಿ, ತಹಶೀಲ್ದಾರರು ಹಾಗೂ ಪಿ.ಡಿ.ಒ.ಗಳು ತ್ವರಿತವಾಗಿ ಪರಿಹಾರ ನೀಡಲು ಕ್ರಮ ತೆಗೆದುಕೊಳ್ಳಬೇಕು. ಮಂಗಳವಾರದ ಒಳಗೆ ಕ್ರಮ ತಗೆದುಕೊಳ್ಳದೇ ಇದ್ದರೆ ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರರನ್ನೇ ಜವಾಬ್ದಾರಿ ಮಾಡಿ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.

ದಾಖಲೆಗಳಿಲ್ಲದ ಮನೆಗಳಿಗೂ ಪರಿಹಾರ : ಹಾನಿಗೀಡಾದ ಕೆಲ ಮನೆಗಳಿಗೆ ದಾಖಲೆಗಳಿಲ್ಲ, ಹೀಗಾಗಿ ಪರಿಹಾರ ಕೊಡಲು ಸಾಧ್ಯವಾಗದು ಎಂದು ವರದಿ ನೀಡಲಾಗಿದೆ. ಆದರೆ, ಇಷ್ಟು ವರ್ಷಗಳ ಕಾಲ ಜನರು ಮನೆ ಕಟ್ಟಿಕೊಂಡು ಅಲ್ಲೇ ವಾಸವಾಗಿದ್ದಾರೆ. ಹೀಗಾಗಿ ಯಾವ ಆಧಾರದ ಮೇಲೆ ಪರಿಹಾರ ನೀಡಬಹುದು ಎಂಬ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಿ ಎಂದು ಸಚಿವರು ತಿಳಿಸಿದರು.

ಮಳೆಯಿಂದಾಗಿ ಲೋಕೋಪಯೋಗಿ ಇಲಾಖೆಗೆ ಸೇರಿದ 29.3 ಕಿ.ಮೀ. ರಸ್ತೆ ಹಾಗೂ 15 ಸೇತುವೆ ಇತ್ಯಾದಿಗಳಿಗೆ ಹಾನಿಯಾಗಿದ್ದು, ಒಟ್ಟಾರೆ 22.4 ಕೋಟಿ (4ನೇ ಪುಟಕ್ಕೆ)

### ನದಿಪಾತ್ರದ ಸಮಸ್ಯೆಗೆ ಶಾಶ್ವತ ಪರಿಹಾರ

ತುಂಗಭದ್ರ ನದಿಯಲ್ಲಿ ಪ್ರವಾಹ ಉಂಟಾದ ಸಂದರ್ಭದಲ್ಲಿ ಕೆಲ ಬಡಾವಣೆಗಳಿಗೆ ನೀರು ನುಗ್ಗುವುದನ್ನು ತಡೆಯಲು ತಡೆಗೋಡೆ ನಿರ್ಮಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜೊತೆ ಚರ್ಚಿಸಿ, ಶೀಘ್ರದಲ್ಲೇ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ ತಿಳಿಸಿದ್ದಾರೆ.


**ಹರಿಹರದಲ್ಲಿ ನದಿಗೆ ತಡೆಗೋಡೆ ನಿರ್ಮಿಸಲು ಪ್ರಸ್ತಾಪ**

ಹರಿಹರ ಹಾಗೂ ಹೊನ್ನಾಳಿಗಳಲ್ಲಿ ನದಿ ಪಾತ್ರದಲ್ಲಿ ಮನೆ ಕಟ್ಟಿಕೊಂಡಿರುವವರನ್ನು ತೆರವುಗೊಳಿಸಿ ಬೇರೆ ಕಡೆ ವಸತಿ ಕಲ್ಪಿಸಬೇಕು. ಪ್ರತಿ ವರ್ಷ ನದಿ ನೀರು ನುಗ್ಗಿದಾಗ ಪುನರ್ವಸತಿ ಕಲ್ಪಿಸುವುದು, ನೀರು ಹಿಂದೆ ಸರಿದಾಗ ಜನರು ಅದೇ ಮನೆಗೆ ಹೋಗುವುದೇ ಆಟವಾಗಬಾರದು ಎಂದು ಸಚಿವರು ತಿಳಿಸಿದರು. ಈ ಬಗ್ಗೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಜಿಲ್ಲಾ ಪಂಚಾಯ್ತಿ ಸಿಇಒ ಚೆನ್ನಪ್ಪ ಹಾಗೂ ಎಸ್ಪಿ ಸಿ.ಬಿ. ರಿಷ್ಯಂತ್ ಅವರು ಜೊತೆಗೂಡಿ 20 ದಿನಗಳಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಬೈರತಿ ಸೂಚನೆ ನೀಡಿದರು.

### ಪ್ರವಾಹ ತಡೆಯಲು ಕೆರೆಗಳ ಬಳಕೆ

ಇನ್ನೂ ಎರಡು ತಿಂಗಳ ಕಾಲ ಬಿರು ಮಳೆ ಮುಂದುವರೆಯುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿರುವ ಕೆರೆಗಳನ್ನು ಪ್ರವಾಹ ತಡೆಗಾಗಿ ಬಳಸಿಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ ಸೂಚನೆ ನೀಡಿದ್ದಾರೆ. ಕೆರೆಗಳಲ್ಲಿ ಪೂರ್ಣ ನೀರು ತುಂಬಿಟ್ಟುಕೊಳ್ಳುವ ಬದಲು, 2- 3 ಅಡಿ ನೀರು ಖಾಲಿ ಮಾಡಿ. ಮುಂದೆ ಬಿರು ಮಳೆ ಬಂದಾಗ ಈ ಕೆರೆಗಳಲ್ಲಿ ನೀರು ಹಿಡಿದಿಡುವುದರಿಂದ ಪ್ರವಾಹ ನಿಯಂತ್ರಣಕ್ಕೆ ನೆರವಾಗುತ್ತದೆ. ಬೆಂಗಳೂರಿನಲ್ಲಿ ಇದೇ ರೀತಿಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದವರು ತಿಳಿಸಿದರು.

## ಮಠಗಳಿಗೆ ಸ್ವಾಮಿ ಆಗುವವರು ವಿವಾಹಿತರಾದರೆ ಉತ್ತಮ



ಹರಪನಹಳ್ಳಿ, ಸೆ.3- ಚಿತ್ರದುರ್ಗ ಮಠದಲ್ಲಿ ನಡೆದಿರುವ ಘಟನೆ, ರಾಜ್ಯದ ಯಾವ ಮಠದ ಸ್ವಾಮಿಗಳಿಗೂ ಆಗಬಾರದು. ಇದರಿಂದ ಮಠ ಮಾನ್ಯಗಳು ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವುದು ವಿಷಾದನೀಯ ಎಂದು ಕೇಂದ್ರ ಸಾಹಿತ್ಯ ಆಕಾಡೆಮಿ ಪುರಸ್ಕೃತ ಸಾಹಿತಿ ಕುಂ.ವೀರಭದ್ರಪ್ಪ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಸಾಹಿತಿ ಡಿ. ರಾಮನಮಲಿರವರ ನಾನು ಕ್ವಾರಂಟೈನ್ ಆದದ್ದು ಪ್ರಬಂಧ ಸಂಕಲನ ಪುಸ್ತಕ ಬಿಡುಗಡೆ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿತ್ರದುರ್ಗ ಮಠದ ಬಸವರಾಜನ್ ಹಾಗೂ ಶ್ರೀಗಳು ಇಬ್ಬರು ಬಾಲ್ಯ ಸ್ನೇಹಿತರಾಗಿದ್ದು, ಪರಸ್ಪರ ಒಪ್ಪಂದದ ಮೇಲೆ ಮಠವನ್ನು ನಡೆಸುತ್ತಿದ್ದರು. ಇವರ ನಡುವೆ ಬಾಂಧವ್ಯ ಉತ್ತಮವಾಗಿತ್ತು. ಸೌಭಾಗ್ಯಮ್ಮ ಜಿಪಂ ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡ ನಂತರ ಹಣಕಾಸಿನ ವಿಚಾರದಲ್ಲಿ ಇಬ್ಬರ ನಡುವೆ ಭಿನ್ನಾಭಿಪ್ರಾಯ ಆರಂಭವಾಗಿದೆ. ಅಲ್ಲಿಂದ ಆಡಳಿತಾಧಿಕಾರಿ ಶ್ರೀಗಳ ವಿರುದ್ಧ ಒಳಗೊಳಗೆ ತಂತ್ರ ರೂಪಿಸುತ್ತಾ ಬಂದಿದ್ದರು ಎನ್ನುವುದು ಜನರ ಅಭಿಪ್ರಾಯವಾಗಿದ್ದು, ಸ್ವಾಮಿಗಳಾದವರು ಕೈ, ಬಾಯಿ, ಕಚ್ಚೆ, ಶುದ್ಧವಾಗಿರಬೇಕು. ಈ ರೀತಿ ಘಟನೆ ನಡೆದಿರುವುದು ನಮಗೆ ಅನುಮಾನ ಮೂಡಿಸಿದೆ. ಆದರೂ ದಲಿತ ಮಗುವಿನ ಮೇಲೆ ಲೈಂಗಿಕ ಹಲ್ಲೆಯಾಗಿರುವುದನ್ನು ನಾನು ಖಂಡಿಸುತ್ತೇನೆ ಎಂದರು.

ನ್ಯಾಯ, ಅನ್ಯಾಯವನ್ನು (4ನೇ ಪುಟಕ್ಕೆ)

## ಮುರುಘಾ ಮಠದಲ್ಲಿ ಎಂದಿನಂತೆ ಪೂಜೆ, ನಿತ್ಯ ದಾಸೋಹ



ಚಿತ್ರದುರ್ಗ ಸೆ. 3 - ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಕರ್ತೃಗದ್ದುಗೆ ಪೂಜಾ ಕೈಂಕರ್ಯಗಳು, ನಿತ್ಯ ದಾಸೋಹ ಎಂದಿನಂತೆ ನಡೆಯಲಿವೆ ಎಂದು ಬೃಹನ್ಮಠದ ಉಸ್ತುವಾರಿ ನೋಡಿಕೊಳ್ಳುತ್ತಿರುವ ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ತಿಳಿಸಿದ್ದಾರೆ.

ಶ್ರೀ ಮಠದಲ್ಲಿ ನಾಡಿದ್ದು ದಿನಾಂಕ 5ರ ಸೋಮವಾರ ಎಂದಿನಂತೆ ಸಾಮೂಹಿಕ ಕಲ್ಯಾಣ ಮಹೋತ್ಸವ ಏರ್ಪಾಡಾಗಿದ್ದು, ಎಲ್ಲಾ ಕಾರ್ಯಗಳಲ್ಲಿ ಶ್ರೀಮಠದ ಭಕ್ತಾದಿಗಳು ಎಂದಿನಂತೆ ಸಹಕರಿಸಬೇಕೆಂದು ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಹೇಳಿದ್ದಾರೆ.

## ಮನೆಕೆಲಸದವರ ರಕ್ಷಣೆಗೆ ಕಠಿಣ ಕಾನೂನು

### ಕಾರ್ಯಕರ್ತರು, ಪರಿಣಿತರ ನಿಲುವು

ನವದೆಹಲಿ, ಸೆ. 3 – ಮನೆಕೆಲಸದವರ ಹಕ್ಕುಗಳನ್ನು ರಕ್ಷಿಸಲು ಹಾಗೂ ಅವರಿಗೆ ನೆರವಾಗಲು ಕಠಿಣ ಕಾನೂನುಗಳ ಅಗತ್ಯವಿದೆ ಎಂದು ಕಾರ್ಯಕರ್ತರು ಹಾಗೂ ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

ಕಠಿಣ ಕಾನೂನುಗಳ ಕೊರತೆಯಿಂದಾಗಿ ಮನೆಕೆಲಸದವರು ಶೋಷಣೆ ಹಾಗೂ ದೂಷಣೆಗೆ ಗುರಿಯಾಗುತ್ತಿದ್ದಾರೆ ಎಂದವರು ತಿಳಿಸಿದ್ದಾರೆ.

ಮನೆಕೆಲಸದವರ ಮೇಲೆ ಬರ್ಬರವಾಗಿ ಹಲ್ಲೆ ಮಾಡಿದ ಹಾಗೂ ಪೀಡಿಸಿದ ಆರೋಪದ ಮೇಲೆ ಮಾಜಿ ಐಎಎಸ್ ಅಧಿಕಾರಿ ಮಹೇಶ್ವರ ಪಾತ್ರ ಅವರ ಪತ್ನಿ ಸೀಮಾ ಪಾತ್ರ ಎಂಬುವವರನ್ನು ಇತ್ತೀಚೆಗೆ ಬಂಧಿಸಲಾಗಿತ್ತು.

ಮನೆಕೆಲಸದ ಮಹಿಳೆಯರನ್ನು ಹಲವು ದಿನಗಳವರೆಗೆ ಉಪವಾಸ ಬಿಡಲಾಗಿತ್ತು. ಅವರ ಮೇಲೆ ಹಲ್ಲೆ ನಡೆಸಿ ಕಬ್ಬಿಣದ ಸರಳಿನಿಂದ ಹಲ್ಲುಗಳನ್ನು ಉದುರಿಸಲಾಗಿತ್ತು. ಕಳೆದ ಮೇ ತಿಂಗಳಲ್ಲೂ ಇದೇ ರೀತಿಯ ಮತ್ತೊಂದು ಘಟನೆ ದೆಹಲಿಯ ರಜೌರಿ ಗಾರ್ಡನ್‌ನಲ್ಲಿ ನಡೆದಿತ್ತು.

ವ್ಯವಸ್ಥೆಯಲ್ಲಿರುವ ಹಲವಾರು ದೌರ್ಬಲ್ಯಗಳ ಕಾರಣದಿಂದಾಗಿ ಮನೆಕೆಲಸದವರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಎಂದು ಆಕ್ಸ್‌ಫಾಮ್ ಇಂಡಿಯಾದ ಜಂಡರ್ ಜಸ್ಟೀಸ್ ಟೀಮ್‌ನ ಕಾರ್ಯಕ್ರಮ ಸಂಯೋಜಕರಾದ ಅನುಶ್ರೀ ಜೈರಥ್ ಹೇಳಿದ್ದಾರೆ.

ಮನೆಕೆಲಸದವರ ಸಶಕ್ತೀಕರಣಕ್ಕಾಗಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯು ಶಕ್ತಿಶಾಲಿ ನೀತಿಗಳನ್ನು ರೂಪಿಸಿದೆ. ಆದರೆ, ಈ ನಿಯಮಗಳಿಗೆ ಭಾರತ ಇನ್ನೂ ಮಾನ್ಯತೆ ನೀಡಿಲ್ಲ ಎಂದು ಜೈರಥ್ ತಿಳಿಸಿದ್ದಾರೆ.

ಭಾರತದಲ್ಲಿ ಮನೆಕೆಲಸವದರು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಗೆ ಒಳಪಡುತ್ತಾರೆ. ಮಹಾರಾಷ್ಟ್ರ, ಒಡಿಶಾ ಹಾಗೂ ಕರ್ನಾಟಕಗಳಂತಹ ಕೆಲ ರಾಜ್ಯಗಳು ಇವರಿಗಾಗಿ ಕಲ್ಯಾಣ ಮಂಡಳಿಗಳನ್ನು ಸ್ಥಾಪಿಸಿವೆ ಮತ್ತು ಕನಿಷ್ಠ ಕೂಲಿ ನಿಗದಿಪಡಿಸಿವೆ. ಆದರೆ, ಇದರಿಂದ ಕೆಲವರಿಗಷ್ಟೇ ನೆರವಾಗಿದೆ. ಕೆಲಸದ ಸ್ಥಳದಲ್ಲಿ ಲೈಂಗಿಕ ಪೀಡನೆ ತಡೆಯಲು ರೂಪಿಸಲಾಗಿರುವ ಕಾಯ್ದೆಯೂ ಮನೆ ಕೆಲಸದವರಿಗೆ ಅನ್ವಯಿಸಬಹುದು ಎಂದವರು ಹೇಳಿದ್ದಾರೆ.

ಪ್ರಸಕ್ತ ಈ ಕಾಯ್ದೆಯನ್ನು ಮನೆಕೆಲಸದವರಿಗೆ ಅನ್ವಯಿಸಿಲ್ಲ. ಕಾರ್ಮಿಕ ಇಲಾಖೆಯೂ ಮನೆಕೆಲಸದವರಿಗೆ ರಾಷ್ಟ್ರ ಮಟ್ಟದ ನೀತಿ ರೂಪಿಸಿದೆ. ಆದರೂ ಅದು ಜಾರಿಗೆ ಬಂದಿಲ್ಲ ಎಂದವರು ತಿಳಿಸಿದ್ದಾರೆ.

ಮನೆಕೆಲಸದವರಿಗೆ ನೆರವಾಗಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚಿಸಬೇಕಿದೆ. (3ನೇ ಪುಟಕ್ಕೆ)

# ವಿದ್ಯಾರ್ಥಿಗಳ ಸಾಧನೆಗೆ ಆರೋಗ್ಯವೂ ಮುಖ್ಯ

## ಜಗಳೂರು ಕರಾಟೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾಜಿ ಶಾಸಕ ರಾಜೇಶ್



ಜಗಳೂರು,ಸೆ.3- ಜೀವನದಲ್ಲಿ ಏನನ್ನಾದರೂ ಸಾಧಿಸಬೇಕಾದರೆ ಆರೋಗ್ಯ ಅತ್ಯಂತ ಮುಖ್ಯ. ಜೀವನದ ಕನಸನ್ನು ನನಸಗಿಸಲು ದೈಹಿಕವಾಗಿ ಸದೃಢರಾಗಿರುವುದು ಅಗತ್ಯ ಎಂದು ಮಾಜಿ ಶಾಸಕ ಎಚ್.ಪಿ.ರಾಜೇಶ್ ಅಭಿಪ್ರಾಯಪಟ್ಟರು.

ಇಲ್ಲಿನ ಸರಕಾರಿ ಪಪೂ ಕಾಲೇಜು ಆವರಣದಲ್ಲಿ ತಾಲೂಕು ಆಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಪಪಂ, ತಾಪಂ, ಕ್ಷೇತ್ರ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಸರಕಾರಿ ಪದವಿ ಪೂರ್ವ ಕಾಲೇಜ್ ಮತ್ತು ದಾವಣಗೆರೆಯ ಕರಾಟೆ ಕೇಸರಿ ಅಸೋಸಿಯೇಷನ್, ಸುದ್ದಿವಿಜಯ ವೆಬ್ ನ್ಯೂಸ್ ಸಂಯುಕ್ತ ಆಶ್ರಯದಲ್ಲಿ ನಡೆದ ಅಮೃತ ವನಿತಾ ಉಚಿತ ಕರಾಟೆ ಶಿಬಿರದ ಸಮಾರೋಪ ಸಮಾರಂಭ ದಲ್ಲಿ ಮಾತನಾಡಿದರು.

ಕರಾಟೆ ಮತ್ತು ಮಾರ್ಷಲ್ ಆರ್ಟ್ಸ್ ಕಲೆಗಳು ನಮ್ಮ ದೇಶದ ಕಲೆಗಳಲ್ಲ ಆದರೂ ಸ್ವಯಂರಕ್ಷಣೆಗೆ ನಾವು ಕಲಿಯುವ ಅಗತ್ಯವಿದೆ. ದೈಹಿಕ ಸಾಮರ್ಥ್ಯ ವನ್ನು ಹೆಚ್ಚಿಸುತ್ತದೆ. ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಇಂತಹ ಕಲೆ ಅತ್ಯಂತ ಅವಶ್ಯಕವಾಗಿದೆ ಎಂದರು.

ಒಂದು ಅಧ್ಯಯನದ ಪ್ರಕಾರ ಪುರುಷರು ಮಹಿಳೆಯರಿಗಿಂತ ಮಾನಸಿಕವಾಗಿ ದುರ್ಬಲರಾಗಿ ರುತ್ತಾರೆ ಎಂದು ತಿಳಿದು ಬಂದಿದೆ. ಆದರೆ ಮಹಿಳೆ ಯರು ಮಾನಸಿಕವಾಗಿ ಸದೃಢವಾಗಿರುವುದಕ್ಕೆ ಝಾನ್ಸಿರಾಣಿ ಲಕ್ಷ್ಮಿಭಾಯಿ, ಒನಕೆ ಓಬವ್ವ, ಕಿತ್ತೂರು ರಾಣಿ ಚನ್ನಮ್ಮರಂತಹ ವೀರ ಮಹಿಳೆಯರು ಬ್ರಿಟೀಷರ ವಿರುದ್ಧ ಹೋರಾಡಿ ಈ ದೇಶ ರಕ್ಷಣೆಗೆ ಶ್ರಮಿಸಿದ ವೀರ ವನಿತೆಯರು. ಅವರಂತೆ ನೀವು ಸಹ ಸದೃಢರಾಗಬೇಕು ಎಂದು ಕರೆ ನೀಡಿದರು.

ಕಾಂಗ್ರೆಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ ಮಾತನಾಡಿ, ಬಾಹ್ಯವಾಗಿ ಗಂಡು ಹೆಣ್ಣು ಎಂದು ವರ್ಗೀಕರಣ ಮಾಡಿಕೊಂಡಿದ್ದೇವೆ. ಆದರೆ ಒಳಗಿರುವ ಆತ್ಮ ಹೆಣ್ಣು ಅಲ್ಲ ಗಂಡು ಅಲ್ಲ. ಸಾಮರ್ಥ್ಯದ ಮೇಲೆ ಅವರರವರ ವ್ಯಕ್ತಿತ್ವ, ಜೀವನ ರೂಪುಗೊಂಡಿರುತ್ತದೆ. ಆತ್ಮರಕ್ಷಣೆ ಕಲೆ ಮೂಲಕ ನಿಮ್ಮನ್ನು ನೀವು ರಕ್ಷಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಈಶ್ವರೀಯ ವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ಭಾರತಿ ಮಾತನಾಡಿ, ಪೋಷಕರು ಬಾಲ್ಯದಲ್ಲೇ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಬಗ್ಗೆ ತಿಳಿವಳಿಕೆ ನೀಡಬೇಕು ಎಂದರು.

ಹೆಣ್ಣು ಸಮಾಜದಲ್ಲಿ ಸಬಲರಾಗಬೇಕಾದರೆ, ಆತ್ಮಸ್ಥೈರ್ಯ ಹೆಚ್ಚಿಸಿಕೊಳ್ಳಬೇಕಾದರೆ ಮಾರ್ಷಲ್ ಆರ್ಟ್ಸ್ ಹೆಚ್ಚು ಕಲಿಯಬೇಕು. ಸಮಾಜದಲ್ಲಿ ದುಷ್ಟ ಶಕ್ತಿಗಳ ನಿರ್ಮೂಲನೆಗೆ ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳಲು ಅಗತ್ಯವಿದೆ ಎಂದರು.

ಕೆಪಿಸಿಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಜಗಳೂರು ಪಟ್ಟಣದಲ್ಲಿ ಇಂತಹ ಶಿಬಿರವನ್ನು ಆಯೋಜಿಸಿರುವುದು ಶ್ಲಾಘನೀಯ. ಮಹಿಳಾ ಸಬಲೀಕರಣಕ್ಕೆ ಅತ್ಯಂತ ಉಪಯುಕ್ತವಾದ ಅಭ್ಯಾಸವಾಗಿದೆ ಎಂದರು.

ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕಲ್ಲೇರುದ್ರೇಶ್ ಮಾತನಾಡಿ, ವಿದ್ಯಾರ್ಥಿನಿಯರು ಇಂತಹ ಕಲೆಗಳನ್ನು ಮೈಗೂಡಿಸಿಕೊಂಡರೆ ಪೊಲೀಸ್ ಇಲಾಖೆಗೆ ಒತ್ತಡ ಕಡಿಮೆಯಾಗುತ್ತದೆ. ಸಮಾಜದಲ್ಲಿರುವ ದುಷ್ಟ ಶಕ್ತಿಗಳಿಗೆ ನೀವೇ ಪಾಠ ಕಲಿಸಲು ಇದು ಸಹಕಾರಿಯಾಗಲಿದೆ ಎಂದರು.

ಸರಕಾರಿ ಕಾಲೇಜಿನ ಉಪಪ್ರಾಂಶುಪಾಲ ಡಿ.ಡಿ.ಹಾಲಪ್ಪ ಮಾತನಾಡಿದರು. ಪಪಂ ಮುಖ್ಯಾಧಿಕಾರಿ ಲೋಕ್ಯಾನಾಯ್ಕ್, ಪತ್ರಕರ್ತರ ಸಂಘದ ಅಧ್ಯಕ್ಷ ಜಿ.ಎಸ್.ಚಿದಾನಂದ, ಹಿರಿಯ ಪತ್ರಕರ್ತರಾದ ಅಣಬೂರು ಮಠದ ಕೊಟ್ರೇಶ್, ಬಿ.ಪಿ.ಸುಭಾನ್, ಕರಾಟೆ ಕೇಸರಿ ಕಾರ್ಯದರ್ಶಿ ಕುಬೇರ್‌ನಾಯ್ಕ್, ನಾಗರಾಜ್ ನಾಯ್ಕ್ ಧನ್ಯ ಕುಮಾರ್, ಪಪಂ ಆರೋಗ್ಯಾಧಿಕಾರಿ ಕಿಫಾಯತ್ ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ನಗರದಲ್ಲಿ ನಾಳೆ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮ್ಮೇಳನ

ದಾವಣಗೆರೆ, ಸೆ. 3- ಭಾರತ ಕಮ್ಯುನಿಸ್ಟ್ ಪಕ್ಷದ ದಾವಣಗೆರೆ ಜಿಲ್ಲಾ ಸಮ್ಮೇಳನವು ನಾಡಿದ್ದು ದಿನಾಂಕ 5 ರ ಸೋಮವಾರ ನಡೆಯಲಿದೆ ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 11 ಗಂಟೆಗೆ ನಗರದ ಪಂಪಾಪತಿ ಭವನದಲ್ಲಿ ಆರಂಭವಾಗುವ ಸಮ್ಮೇಳನದ ಉದ್ಘಾಟನೆಯನ್ನು ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯರಾದ ಪಿ.ವಿ. ಲೋಕೇಶ್ ನೆರವೇರಿಸುವರು.

# ಏಷ್ಯಾ ಕಪ್‌ನಲ್ಲಿ ಭಾರತ ಜಯಗಳಿಸಲು ಕ್ರೀಡಾಪಟುಗಳ ಸಂಘದಿಂದ ವಿಶೇಷ ಪೂಜೆ



ದಾವಣಗೆರೆ ಸೆ. 3 - ನಾಳೆ ನಡೆಯುವ ಏಷ್ಯಾಕಪ್ ಫೈನಲ್ ಪಂದ್ಯಾವಳಿಯಲ್ಲಿ ಭಾರತ ತಂಡ ಜಯಗಳಿಸಲಿ ಎಂದು ಜಿಲ್ಲಾ ಕ್ರೀಡಾಪಟುಗಳ ಸಂಘದವರು ಶನಿವಾರ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಪ್ರಾರ್ಥಿಸಿದರು.

ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ನೇತೃತ್ವದಲ್ಲಿ ನಡೆದ ಈ ಸರಳ ಪೂಜಾ ಸಮಾರಂಭದಲ್ಲಿ ಪಾಲಿಕೆ ಸದಸ್ಯ ಎ.ನಾಗರಾಜ್, ಜಿಲ್ಲಾ ಕ್ರೀಡಾಪಟುಗಳ ಸಂಘದ ಶಿವಗಂಗಾ ಶ್ರೀನಿವಾಸ್, ಹೆಚ್.ಮಹಾದೇವ್, ಕುರುಡಿ ಗಿರೀಶ್, ಜಯಪ್ರಕಾಶ್, ರಂಗಸ್ವಾಮಿ, ದಿನೇಶ್, ಎಂ.ಆರ್. ಮಾಲತೇಶ್, ರಘು, ಪಾಟೀಲ್ ಮತ್ತಿತರರಿದ್ದರು.

## 9 ರಿಂದ ನಿರ್ಣಾಯಕರ-ತೀರ್ಪುಗಾರರ ಕಾರ್ಯಾಗಾರ

ದಾವಣಗೆರೆ, ಸೆ.3- ಬೆಂಗಳೂರಿನ ವಿಭೂತಿಪುರ ಮಠದ ಎಸ್‌ಜೆಪಿ ಕಲ್ಯಾಣ ಮಂಟಪದಲ್ಲಿ ಇದೇ ದಿನಾಂಕ 9 ರಿಂದ 11ರವರೆಗೆ ಕರ್ನಾಟಕ ಯೋಗಾಸನ ಕ್ರೀಡಾ ಸಂಸ್ಥೆ ವತಿಯಿಂದ ಕರ್ನಾಟಕ ರಾಜ್ಯ ಯೋಗಾಸನ ನಿರ್ಣಾಯಕರ ಮತ್ತು ತೀರ್ಪುಗಾರರ ಕಾರ್ಯಾಗಾರ ನಡೆಯಲಿದೆ.

ಕರ್ನಾಟಕ ಯೋಗಾಸನ ಕ್ರೀಡಾ ಸಂಸ್ಥೆ ರಾಜ್ಯದ ಎಲ್ಲ ಆಸಕ್ತ ಶಾಲಾ, ಕಾಲೇಜಿನ ದೈಹಿಕ ಶಿಕ್ಷಣ ಶಿಕ್ಷಕರು, ಯೋಗ ಶಿಕ್ಷಕರು ಹಾಗೂ ಯೋಗಾಸನ ಕ್ರೀಡಾ ಸ್ಪರ್ಧೆಗಳಲ್ಲಿ ನಿರ್ಣಾಯಕ ಅಥವಾ ತೀರ್ಪುಗಾರರು ಆಗ ಬಯಸಿದ ಎಲ್ಲ ಯೋಗ ಪ್ರೇಮಿಗಳು ನಾಡಿದ್ದು ದಿನಾಂಕ 5ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ವಿವರಕ್ಕೆ ಆಯಾ ಯೋಗಾಸನ ಕ್ರೀಡಾ ಸಂಸ್ಥೆಯ ಜಿಲ್ಲಾ ಮುಖ್ಯ ಸಂಯೋಜಕರಾದ ಎನ್.ಪರಶುರಾಮಪ್ಪ (9916331671), ಸುನೀಲ್ (9901663389) ಅವರನ್ನು ಸಂಪರ್ಕಿಸಬಹುದು.

## ದೊಡ್ಡಪೇಟೆಯಲ್ಲಿ ಗಣೇಶ ವಿಸರ್ಜನೆ

**ನಗರದಲ್ಲಿ ಇಂದು**

ದೊಡ್ಡಪೇಟೆಯ ಶ್ರೀ ವಿನಾಯಕ ದೇವಸ್ಥಾನದ ಗಣೇಶ ಮಹೋತ್ಸವದಲ್ಲಿ ಇಂದು ಸಂಜೆ 6 ಗಂಟೆಗೆ ಸರ್ವಾಲಂಕೃತವಾದ ಮಯೂರ ರಥದಲ್ಲಿ ಶ್ರೀ ಸ್ವಾಮಿಯ ಉತ್ಸವ ನಡೆದು, ನಂತರ ಶ್ರೀ ವಿನಾಯಕ ಮೂರ್ತಿ ಯನ್ನು ಹೊಂಡದಲ್ಲಿ ವಿಸರ್ಜಿಸಲಾಗುವುದು.

ಕಾರ್ಯಕ್ರಮದ ಅಂಗವಾಗಿ ನಾಳೆ ಸೋಮವಾರ ಮಧ್ಯಾಹ್ನ 12.30 ರಿಂದ ದಾಸೋಹ ನಡೆಯುವುದು. ಸೇವಾರ್ಥಿಗಳು : ದಿ. ಅಜ್ಜಂಪುರದ ಗೋವಿಂದ ಸ್ವಾಮಿಯವರ ಜ್ಞಾಪಕಾರ್ಥ ಅಜ್ಜಂಪುರ ಮಂಜುನಾಥ ಮತ್ತು ಮಕ್ಕಳು, (ಶ್ರೀ ಲಿಂಗೇಶ್ವರ ಅಂಡ್ ಕೋ) ಇವರಿಂದ ನಡೆಯಲಿದೆ.

## ರೈತರಿಗೆ ತರಬೇತಿ

ದಾವಣಗೆರೆ, ಸೆ.3- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ನಗರದ ಪಶು ಆಸ್ಪತ್ರೆ ಅವರಣ ದಲ್ಲಿರುವ ರೈತರಿಗೆ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ ಶಿಬಿರ ನಡೆಯಲಿದೆ. ಇದೇ ದಿನಾಂಕ 5 ರಿಂದ ಇದೇ ದಿನಾಂಕ 13 ರವರೆಗೆ ಕುರಿ ಮತ್ತು ಮೇಕೆ ಸಾಕಾಣಿಕೆ ಬಗ್ಗೆ ತರಬೇತಿ, ಆಧುನಿಕ ಹೈನುಗಾರಿಕೆ ಬಗ್ಗೆ ತರಬೇತಿ ಕಾರ್ಯಕ್ರಮದಲ್ಲಿ ತಲಾ 25 ಜನರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ. ವಿವರಕ್ಕ ಸಂಪರ್ಕಿಸುವ ದೂರವಾಣಿ 08192-233787.

## ತ್ಯಾಜ್ಯ ವಿಲೇವಾರಿ ಕುಂಠಿತ ಪ.ಬಂಗಾಳಕ್ಕೆ 3,500 ಕೋಟಿ ದಂಡ

ನವದೆಹಲಿ, ಸೆ. 3 – ಘನ ಹಾಗೂ ದ್ರವ ತ್ಯಾಜ್ಯಗಳ ಉತ್ಪಾದನೆ ಮತ್ತು ವಿಲೇವಾರಿಯಲ್ಲಿ ಇರುವ ಭಾರೀ ವ್ಯತ್ಯಾಸದ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳ ಸರ್ಕಾರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ 3,500 ಕೋಟಿ ರೂ.ಗಳ ದಂಡ ವಿಧಿಸಿದೆ. ತ್ಯಾಜ್ಯ ನಿರ್ವಹಣೆಗೆ 2022-23ರ ಸಾಲಿಗೆ 12,818.99 ಕೋಟಿ ರೂ. ನೀಡಿರುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ. ಆದರೂ, ತ್ಯಾಜ್ಯ ಸಂಸ್ಕರಣೆ ಘಟಕಗಳ ಸ್ಥಾಪನೆಗೆ ಆದ್ಯತೆ ನೀಡುತ್ತಿಲ್ಲ ಎಂದು ನ್ಯಾಯಾಧೀಕರಣ ಹೇಳಿದೆ. ತ್ಯಾಜ್ಯದಿಂದ ಆಗುತ್ತಿರುವ ಆರೋಗ್ಯ ಹಾನಿಯನ್ನು ಹೆಚ್ಚು ಕಾಲ ಕಡೆಗಣಿಸಲಾಗದು ಎಂದು ನ್ಯಾಯಾಧೀಕರಣದ ಅಧ್ಯಕ್ಷರಾಗಿರುವ ನ್ಯಾಯಮೂರ್ತಿ ಎ.ಕೆ. ಗೋಯಲ್ ಹೇಳಿದ್ದಾರೆ.

ರಾಜ್ಯದಲ್ಲಿರುವ ನಗರ ಪ್ರದೇಶಗಳಲ್ಲಿ 2,758 ದಶಲಕ್ಷ ಲೀಟರ್ ಕೊಳಚೆ ನೀರು ಪ್ರತಿದಿನ ಹೊರ ಬರುತ್ತಿದೆ. ಈ ಪೈಕಿ 1,268 ದಶಲಕ್ಷ ಲೀಟರ್ ತ್ಯಾಜ್ಯ ಮಾತ್ರ ಸಂಸ್ಕರಣೆಯಾಗುತ್ತಿದೆ. ಘನತ್ಯಾಜ್ಯ ವಿಲೇವಾರಿಯೂ ಅಸಮರ್ಪಕವಾಗಿದೆ ಎಂದು ಟ್ರಿಬ್ಯೂನಲ್ ಹೇಳಿದೆ.

## ರೈತ ಒಕ್ಕೂಟದಿಂದ 7ಕ್ಕೆ ಭದ್ರೆಗೆ ಬಾಗಿನ

ದಾವಣಗೆರೆ, ಸೆ.3- ಜಿಲ್ಲಾ ಭಾರತೀಯ ರೈತ ಒಕ್ಕೂಟದಿಂದ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ರೈತ ಮುಖಂಡ ಪ್ರೊ. ಸಿ. ನರಸಿಂಹಪ್ಪ ಅವರ ನೇತೃತ್ವದಲ್ಲಿ ಇದೇ ದಿನಾಂಕ 7 ರಂದು ಬೆಳಿಗ್ಗೆ 11 ಗಂಟೆಗೆ ಭದ್ರಾಗೆ ಬಾಗಿನ ಅರ್ಪಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಜಿಲ್ಲಾಧ್ಯಕ್ಷ ಶಾಮನೂರು ಲಿಂಗರಾಜ್ ತಿಳಿಸಿದ್ದಾರೆ.

## 200 ಕೋಟಿ ರೂ. ವಂಚನೆ ಪ್ರಕರಣ : ನಟಿ ನೂರಾ ಫತೇಹಿ ವಿಚಾರಣೆ

ನವದೆಹಲಿ, ಸೆ. 3 – ವಂಚಕ ಸುಕೇಶ್ ಚಂದ್ರಶೇಖರ್ ಹಣ ವಸೂಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟಿ ನೂರಾ ಫತೇಹಿ ವಿಚಾರಣೆ ಮಾಡಿರುವುದಾಗಿ ದೆಹಲಿ ಪೊಲೀಸರ ಆರ್ಥಿಕ ಅಪರಾಧ ದಳದ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವಾರ ಫತೇಹಿ ಅವರಿಗೆ ಸಮನ್ಸ್ ಕಳಿಸಲಾಗಿತ್ತು. ಶುಕ್ರವಾರ ಮಂದಿರ ಮಾರ್ಗ್‌ನಲ್ಲಿರುವ ಕಚೇರಿಯಲ್ಲಿ ವಿಚಾರಣೆ ನಡೆಸಲಾಗಿದೆ.

ಫೋರ್ಟಿಸ್ ಹೆಲ್ತ್‌ಕೇರ್ ಮಾಜಿ ಪ್ರವರ್ತಕ ಶಿವಿಂದರ್ ಮೋಹನ್ ಸಿಂಗ್ ಅವರ ಪತ್ನಿ ಅದಿತಿ ಸಿಂಗ್ ಸೇರಿದಂತೆ ಹಲವರ ವಂಚನೆ ಆರೋಪ ಚಂದ್ರಶೇಖರ್ ಮೇಲಿದೆ. ಪ್ರಸಕ್ತ ಆರೋಪಿಯನ್ನು ಜೈಲಿನಲ್ಲಿರಿಸಲಾಗಿದೆ. ಚಂದ್ರಶೇಖರ್ ಸುಮಾರು 200 ಕೋಟಿ ರೂ. ವಂಚಿಸಿರುವುದಾಗಿ ಪೊಲೀಸರು ಆರೋಪಿಸಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವೂ ಫತೇಹಿ ವಿಚಾರಣೆ ನಡೆಸಿತ್ತು.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೋರ್ವ ನಟಿ ಜಾಕಲೀನ್ ಫರ್ನಾಂಡೀಸ್ ಹೆಸರನ್ನು ಆರೋಪ ಪಟ್ಟಿಯಲ್ಲಿ ಸೇರಿಸಲಾಗಿದೆ.

ಫತೇಹಿ ಹಾಗೂ ಫರ್ನಾಂಡೀಸ್ ಅವರು ಚಂದ್ರಶೇಖರ್‌ನಿಂದ ಐಷಾರಾಮಿ ಕಾರು ಹಾಗೂ ದುಬಾರಿ ಕೊಡುಗೆಗಳನ್ನು ಪಡೆದಿದ್ದರು ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

## ಶಿಕ್ಷಕ ನಾಗೇಂದ್ರಪ್ಪರ ಪುಸ್ತಕ ಇಂದು ಲೋಕಾರ್ಪಣೆ

ಭದ್ರಾವತಿಯ ನವಚೇತನ ಕನ್ನಡ ಶಾಲೆಯ ಶಿಕ್ಷಕ ಸಿ. ಎಚ್.ನಾಗೇಂದ್ರಪ್ಪ ಅವರ ಚೊಚ್ಚಲ ಕೃತಿ 'ಹಾಲಕ್ಕಿ ನುಡಿತೈತೆ' ಕವನ ಸಂಕಲನವು ಕುವೆಂಪು ಕನ್ನಡ ಭವನದಲ್ಲಿ ಇಂದು ಲೋಕಾರ್ಪಣೆಯಾಗಲಿದೆ.

ಕನ್ನಡ ಗತ ವೈಭವ ಸಾಂಸ್ಕೃತಿಕ ಹಾಗೂ ವಿವಿಧೋದ್ದೇಶ ಸಂಸ್ಥೆ ಹಮ್ಮಿಕೊಂಡಿರುವ ಪ್ರಶಸ್ತಿ ಪ್ರದಾನ, ರಾಜ್ಯಮಟ್ಟದ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಶ್ರೀಯುತರ ತಾಯಿ ಶ್ರೀಮತಿ ಚಂದ್ರಮ್ಮ ಚಿರಡೋಣಿ ಹಾಲಪ್ಪ ಪುಸ್ತಕ ಲೋಕಾರ್ಪಣೆ ಮಾಡುವರು ಎಂದು ಕನ್ನಡ ಸಾಂಸ್ಕೃತಿಕ ಗತವೈಭವ ಸಂಸ್ಥೆಯ ಅಧ್ಯಕ್ಷ ಡಾ. ಶಕೀಬ್ ಕಣದ್ಮನೆ ತಿಳಿಸಿದ್ದಾರೆ.

## ಕಾರಿಗನೂರಿನಲ್ಲಿ ನಾಳೆ ಸಿದ್ಧಾರೂಢ ಸ್ವಾಮಿಗಳ ಪುಣ್ಯಮಂಗಲ

ಚನ್ನಗಿರಿ, ಸೆ. 3- ಕಾರಿಗನೂರು ಗ್ರಾಮದ ಶ್ರೀ ನಿಜಗುಣ ಶಿವಯೋಗಿ ಆಶ್ರಮದಲ್ಲಿ ನಾಡಿದ್ದು ದಿನಾಂಕ 5 ಮತ್ತು 6 ರಂದು ಶ್ರಾವಣ ಮಾಸದ 47ನೇ ವರ್ಷದ ಶ್ರೀ ಸಿದ್ಧಾರೂಢ ಸ್ವಾಮಿಗಳ ಪುಣ್ಯಮಂಗಲ ಕಾರ್ಯಕ್ರಮ ಜರುಗಲಿದೆ.

# ಹರಿಹರ : ಎಸ್ಸೆಸ್ಸೆಂ ಜನ್ಮದಿನದ ಅಂಗವಾಗಿ ಕರೋಕೆ ಗಾಯನ ಸ್ಪರ್ಧೆ

ಹರಿಹರ, ಸೆ. 3 - ಮಾಜಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಹುಟ್ಟುಹಬ್ಬದ ಅಂಗವಾಗಿ ಉದಯೋನ್ಮುಖ ಸಂಗೀತಾಸಕ್ತರ ಪ್ರತಿಭೆಯನ್ನು ಅನಾವರಣಗೊಳಿಸಲು, ಕುಹೂ ಕುಹೂ ಕರೋಕೆ ಸಂಸ್ಥೆಯ ವತಿಯಿಂದ, ಕುಹೂ ಕುಹೂ ಕನ್ನಡ ಹಿಂದಿ ಕರೋಕೆ ಗಾಯನ ಸ್ಪರ್ಧೆಯನ್ನು ಆಯೋಜಿಸ ಲಾಗಿದೆ ಎಂದು ಮಾಜಿ ನಗರಸಭೆ ಅಧ್ಯಕ್ಷ ಕೆಪಿಸಿಸಿ ಸದಸ್ಯ ಬಿ. ರೇವಣಸಿದ್ದಪ್ಪ ತಿಳಿಸಿದ್ದಾರೆ.




ನಗರದ ಪತ್ರಿಕಾಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಆಧುನಿಕ ತಾಂತ್ರಿಕತೆಯ ಕರೋಕೆ ಶೈಲಿಗೆ ಒಳಪಡಿಸಿಕೊಳ್ಳುವುದರಿಂದ ಕೇಳುಗರಿಗೆ ಒಬ್ಬ ಸಾಮಾನ್ಯ ಗಾಯಕನೂ ಅದ್ಭುತ ಗಾಯಕನಂತೆ ಗೋಚರಿಸುತ್ತಾನೆ. ಇದು ಕರೋಕೆ ವೈಶಿಷ್ಟ್ಯ. ಆದ್ದರಿಂದ ಮಲ್ಲಿಕಾರ್ಜುನ್ ಅಭಿಮಾನಿಗಳ ಬಳಗದೊಂದಿಗೆ ಕುಹೂ ಕುಹೂ ದಾವಣಗೆರೆ ಕೋಗಿಲೆ ಪುನೀತ್ ರಾಜ್‌ಕುಮಾರ್ ಅವಾರ್ಡ್ ಎಂಬ ಶೀರ್ಷಿಕೆಯಡಿಯಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಹೇಳಿದರು.

ಸಂಚಾಲಕ ಸುರೇಶ್ ಬಾಬು ಮಾತನಾಡಿ, ಮೊದಲ ಸುತ್ತಿನ ಧ್ವನಿ ಪರೀಕ್ಷೆ ಇದೇ ದಿನಾಂಕ 10 ಕ್ಕೆ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ನಡೆಯಲಿದೆ.

ದಿನಾಂಕ 11 ಹಾಗೂ 17 ರಂದು ಕುವೆಂಪು ಕನ್ನಡ ಭವನದಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ದ್ವಿತೀಯ ಹಾಗೂ ತೃತೀಯ ಸುತ್ತಿನ ಪರೀಕ್ಷೆ ನಡೆಯಲಿದೆ.

ನಾಲ್ಕನೇ ಸುತ್ತಿನ ಪರೀಕ್ಷೆ ದಿನಾಂಕ 18 ರಂದು ಹರಿಹರ ಬಸ್ ನಿಲ್ದಾಣ ಹತ್ತಿರದ ಗುರುಭವನದಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ರವರಿಗೆ ನಡೆದು, ದಿನಾಂಕ 22 ರ ಗುರುವಾರ ಸಂಜೆ 4 ಗಂಟೆಗೆ ಗ್ರ್ಯಾಂಡ್ ಫಿನಾಲೆ ಕಾರ್ಯಕ್ರಮ ನಡೆಯುತ್ತದೆ.

ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ನಟ ದರ್ಶನ್ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ವಿಜೇತರಿಗೆ ಕುಹೂ ಕುಹೂ ದಾವಣಗೆರೆ ಕೋಗಿಲೆ ಡಾ. ಪುನೀತ್ ರಾಜ್‌ಕುಮಾರ್ ಅವಾರ್ಡ್ ನೀಡಲಾಗುತ್ತದೆ. 8 ವರ್ಷದೊಳಗೆ,16 ವರ್ಷದೊಳಗೆ 25 ವರ್ಷದೊಳಗೆ ಹಾಗೂ 25 ವರ್ಷ ಮೇಲ್ಪಟ್ಟವರು ಭಾಗವಹಿಸಬಹುದು.

ಈ ಸಂದರ್ಭದಲ್ಲಿ ನೇತ್ರಾವತಿ ಪ್ಯಾಟಿ, ವಿದ್ಯಾಗಡ್ಡದ್, ಮಹಮ್ಮದ್ ಪೈರೋಜ್, ರಾವುಲ್, ರೇವಣಸಿದ್ದಪ್ಪ, ಜಡೆ ಶ್ರೀನಿವಾಸ್ ಮೂರ್ತಿ ಇತರರು ಹಾಜರಿದ್ದರು.


## ಹವಳದ ಮೌನೇಶಪ್ಪ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್, ರೆಡ್ಡಿ ಬಿಲ್ಡಿಂಗ್ ಹತ್ತಿರ, 7ನೇ ಕ್ರಾಸ್, ಮನೆ ಸಂಖ್ಯೆ 2508, 'ಜಯದೇವ ನಿಲಯ'ದ ವಾಸಿ, **ಶ್ರೀ ಹವಳದ ಮೌನೇಶಪ್ಪ** (ಗುಮಾಸ್ತರು) ಅವರು ದಿನಾಂಕ 03.09.2022ರ ಶನಿವಾರ ರಾತ್ರಿ 8 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 76 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.09.2022ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ನಗರದ ಬೂದಾಳ್ ರಸ್ತೆಯಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ ಹೆಚ್.ಎಂ. ವಿಶ್ವನಾಥ್ ಮತ್ತು ಸಹೋದರರು**
**ಹವಳದ ವಂಶಸ್ಥರು, ದಾವಣಗೆರೆ.** ಮೊಬೈಲ್ : **96635 98632, 99019 30814**

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

## ಪ್ರಥಮ ವರ್ಷದ ಪುಣ್ಯಸ್ಮರಣೆ

**ಶ್ರೀಮತಿ ರತ್ನಮ್ಮ ಶಿವರುದ್ರಪ್ಪ ದೇವಿಗೆರೆ ಮತ್ತು ಮಕ್ಕಳು**
**ಶ್ರೀಮತಿ ಮೀನಾಕ್ಷಮ್ಮ ವೀರಭದ್ರಪ್ಪ ದೇವಿಗೆರೆ ಪರಿವಾರ**
ಇವರು ಮಾಡುವ ಶರಣು ಶರಣಾರ್ಥಿಗಳು.



ಜನನ : 25.04.1946 ಲಿಂಗೈಕ್ಯ : 14.09.2021

### ಲಿಂಗೈಕ್ಯ ಶರಣ ದೇವಿಗೆರೆ ವೀರಭದ್ರಪ್ಪ

ದಾವಣಗೆರೆ ದೇವಿಗೆರೆ ಬ್ರದರ್ಸ್ ಮಾಲೀಕರು, ದಾವಣಗೆರೆ ಬಸವ ಬಳಗದ ಅಧ್ಯಕ್ಷರು

ಬಸವತತ್ವ ನಿಷ್ಠರು, ಬಸವ ಬಳಗದ ಅಧ್ಯಕ್ಷರೂ ಆಗಿ, ಕ್ರಿಯಾಶೀಲರಾಗಿ ಸೇವೆ ಸಲ್ಲಿಸಿ ಕಾಯಕ ದಾಸೋಹಮೂರ್ತಿಗಳಾಗಿ, ಹೃದಯ ಶ್ರೀಮಂತರಾಗಿ ಬಾಳಿ-ಬೆಳಗಿದ
**ಲಿಂ॥ ದೇವಿಗೆರೆ ವೀರಭದ್ರಪ್ಪನವರಿಗೆ ನುಡಿನಮನ ಕಾರ್ಯಕ್ರಮವು**
ದಿನಾಂಕ 04-09-2022 ರ ಭಾನುವಾರ ಬಸವ ಸಮಯ ಬೆಳಗ್ಗೆ 11 ಗಂಟೆಗೆ
ಬಸವ ಬಳಗ, ಸರಸ್ವತಿ ನಗರ, ದಾವಣಗೆರೆ ಇಲ್ಲಿ ನೆರವೇರಲಿದೆ. ತಾವುಗಳು ಆಗಮಿಸಿ ಈ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪ್ರಸಾದ ಸ್ವೀಕರಿಸಬೇಕೆಂದು ಭಕ್ತಿಯಿಂದ ಭಿನ್ನವಿಸುತ್ತೇವೆ.

**ನುಡಿನಮನ ಕಾರ್ಯಕ್ರಮ**

- **ಶ್ರೀ ಸಿದ್ದರಾಮ ಶರಣರು,** ಅನುಭಾವಿಗಳು, ಬಸವಬಳಗ, ದಾವಣಗೆರೆ
- **ಶ್ರೀ ಬಸವಕುಮಾರ ಸ್ವಾಮೀಜಿ,** ವನಶ್ರೀಮಠ, ಬಿಜಾಪುರ
- **ಮಾತೆ ವಾಗ್ದೇವಿ ತಾಯಿಯವರು,** ಬಸವತತ್ವ ಅನುಭವ ಕೇಂದ್ರ, ಬೆಳಗಾವಿ
- **ಮಾತೆ ಕುಮುದಿನಿ ತಾಯಿಯವರು,** ಬಸವತತ್ವ ಅನುಭವ ಕೇಂದ್ರ, ಬೆಳಗಾವಿ
- **ಶ್ರೀ ಅಶೋಕ ಬರಗುಂಡಿ,** ಅನುಭಾವಿಗಳು, ಗದಗ
- **ಶ್ರೀ ರವಿ ಯಡಿಹಳ್ಳಿ,** ಅನುಭಾವಿಗಳು, ಜಮಖಂಡಿ

ತಮ್ಮ ಆಗಮನವನ್ನು ನಿರೀಕ್ಷಿಸುತ್ತಿರುವ : **ಶ್ರೀಮತಿ ರತ್ನಮ್ಮ ಶಿವರುದ್ರಪ್ಪ ದೇವಿಗೆರೆ ಮತ್ತು ಮಕ್ಕಳು**
**ಶ್ರೀಮತಿ ಮೀನಾಕ್ಷಮ್ಮ ದೇವಿಗೆರೆ (ಲಿಂಗೈಕ್ಯರ ಧರ್ಮಪತ್ನಿ) ಮತ್ತು ಮಕ್ಕಳು**
**ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ದೇವಿಗೆರೆ ವಂಶಸ್ಥರು,**
**ದೇವಿಗೆರೆ ಬ್ರದರ್ಸ್ ಸಿಬ್ಬಂದಿ ವರ್ಗ ದಾವಣಗೆರೆ, ಬಸವ ಬಳಗದ ಸದಸ್ಯರು ಹಾಗೂ ಬಂಧು ಮಿತ್ರರು.**
ಮೊ. : 9448126982, 9880331602, 9845411958

## 12ನೇ ವರ್ಷದ ಪುಣ್ಯಸ್ಮರಣೆ



**ದಿ॥ ಸಣ್ಣಗೌಡ್ರ ದ್ಯಾಮಪ್ಪನವರು**
ಶಾಮನೂರು
ನಿಧನ : 04.09.2010

ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : **ಶ್ರೀಮತಿ ಎಸ್.ಜಿ.ಲಕ್ಕಮ್ಮ ಸಣ್ಣಗೌಡ್ರ ದ್ಯಾಮಪ್ಪ**
**ಶ್ರೀಮತಿ ಪುಷ್ಪ ಉಮೇಶ್ ಮತ್ತು ಶ್ರೀ ಬಿ. ಉಮೇಶ್**
**ಶ್ರೀ ಉಲ್ಲಾಸ್ ಬಿ. ಯು., ಡಾ॥ ಉಜ್ವಲ ಬಿ.ಯು.,**
**ಚಿ॥ ಹರ್ಷ ಹಾಗೂ ಬಂಧು-ಮಿತ್ರರು.**

## ಶ್ರೀಮತಿ ರೂಪ ನಿಧನ




ದಾವಣಗೆರೆ ವಿದ್ಯಾನಗರ, ವಿನಾಯಕ ಬಡಾವಣೆ ವಾಸಿ ಎನ್.ಬಿ ಸುರೇಶ್ ಪಿ.ಡಿ.ಓ ಆನಗೋಡು ಇವರ ಧರ್ಮಪತ್ನಿ **ಶ್ರೀಮತಿ ರೂಪ (47)** ಅವರು ದಿನಾಂಕ 3.9.2022ರಂದು ಶನಿವಾರ ರಾತ್ರಿ 11.15ಕ್ಕೆ ನಿಧನರಾಗಿದ್ದಾರೆ. ಪತಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 4.9.2022ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮ ಹಿರಿಯೂರಿನಲ್ಲಿ ನೆರವೇರಿಸಲಾಗುವುದು.

ವಿ.ಸೂ : ಮೃತರ ಪಾರ್ಥಿವ ಶರೀರವನ್ನು ವಿದ್ಯಾನಗರ, ವಿನಾಯಕ ಬಡಾವಣೆ ಅವರ ಸ್ವಗೃಹದಲ್ಲಿ ಭಾನುವಾರ ಬೆಳಿಗ್ಗೆ 9.30ರವರೆಗೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇರಿಸಲಾಗುವುದು.

ಇಂತಿ ದುಃಖತಪ್ತರು : **ಪತಿ : ಎನ್.ಬಿ ಸುರೇಶ್ ಮತ್ತು ಮಕ್ಕಳು.**
**ಮೊ : 94814 19449**

## ಆರನೇ ವರ್ಷದ ಪುಣ್ಯಸ್ಮರಣೆ




ಜನನ : 31.08.1976 ಮರಣ : 04.09.2016

ಮನವೆಂಬ ಮಂದಿರದಲ್ಲಿ ಕನಸೆಂಬ ಸಾಗರದ ನೆನಪೆಂಬ ಅಲೆಗಳಲ್ಲಿ ಚಿರಕಾಲ ಮಿನುಗುತ್ತಿರುವ
**ಶ್ರೀ ಚಿಕ್ಕನಳ್ಳೇರ ಎಸ್. ನಟರಾಜ್**
ನೀವು ನಮ್ಮನ್ನು ಅಗಲಿ ಆರು ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿ ಜೀವನ ನಡೆಸುತ್ತಿರುವ,


ಶ್ರೀಮತಿ ಸುನಂದಮ್ಮ ಹೆಚ್.ಜಿ. ಶಿವಮೂರ್ತೆಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು
ಮೃತರ ಧರ್ಮಪತ್ನಿ ಶ್ರೀಮತಿ ಹೆಚ್.ಎನ್. ರೂಪಾ, ಮಕ್ಕಳಾದ : ನಿಶ್ಚಿತಾ ಎನ್. ಮತ್ತು ಮಾನಸಿ ಎನ್. ಹಾಗೂ ಚಿಕ್ಕನಳ್ಳೇರ ವಂಶಸ್ಥರು, ಹೆಚ್. ಕಲಪನಹಳ್ಳಿ.

## ಜಿ.ಎಂ. ಬಸವರಾಜ್ ನಿಧನ



ದಾವಣಗೆರೆ ಸಿಟಿ ಶಾಮನೂರು ದಾಲರ್ಸ್ ಕಾಲೋನಿ ವಾಸಿ ಜಿ.ಎಂ. ಬಸವರಾಜ್ (39) ಅವರು ದಿನಾಂಕ 3.9.2022ರ ಶನಿವಾರ ಸಂಜೆ 6.30ಕ್ಕೆ ನಿಧನರಾದರು. ತಂದೆ, ತಾಯಿ, ಸಹೋದರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.9.2022ರ ಭಾನುವಾರ ಮಧ್ಯಾಹ್ನ 12 ಗಂಟೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಶತಾಯುಷಿ ಈರಮ್ಮ ನಿಧನ



ದಾವಣಗೆರೆ ಎಸ್.ಓಜಿ ಕಾಲೋನಿ ವಾಸಿ ಯಲಗೋಡು ದಿ.ಹೆಚ್. ಈಶ್ವರಪ್ಪನವರ ಧರ್ಮಪತ್ನಿ ಶತಾಯುಷಿ ಶ್ರೀಮತಿ ಈರಮ್ಮ (102) ಅವರು ದಿನಾಂಕ 3.9.2022ರ ಶನಿವಾರ ಸಂಜೆ 5.30ಕ್ಕೆ ನಿಧನರಾದರು. ಐವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.9.2022ರ ಭಾನುವಾರ ಮಧ್ಯಾಹ್ನ 12.30ಕ್ಕೆ ನಗರದ ಎಸ್.ಓ.ಜಿ ಕಾಲೋನಿಯ ರುದ್ರಭೂಮಿಯಲ್ಲಿ ನೆರವೇರಲಿದೆ.

## ಶ್ರೀಶೈಲ ಜಗದ್ಗುರುಗಳ ವರ್ಧಂತೋತ್ಸವ : ಸುವರ್ಣ ಸಂಭ್ರಮ

# ಚತುರ್ಭಾಷಾ ಪಾರಂಗತ ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಶ್ರೀಗಳು

**ಬಾ.ಮ. ಬಸವರಾಜಯ್ಯ**

ವಿವಿಧ ಧರ್ಮಗಳಲ್ಲಿ ಏಕತೆ ಕಂಡುಕೊಂಡ, ಸರ್ವಧರ್ಮ ಸಹಿಷ್ಣತೆಯ ದೇಶ ನಮ್ಮ ಭಾರತ ಈ ಮಾತನ್ನು ನಾವು ತುಂಬಾ ಹೆಮ್ಮೆಯಿಂದ ಹೇಳಿಕೊಳ್ಳಬಹುದು.

ನಮ್ಮ ದೇಶದ ವಿವಿಧ ಧಾರ್ಮಿಕ ಪರಂಪರೆಯಲ್ಲಿ ವೀರಶೈವ ಧರ್ಮ ಪ್ರಾಚೀನವಾದದ್ದು. ಹರಪ್ಪಾ-ಮಹೇಂಜುದಾರೊ ಚಾರಿತ್ರಿಕ ಐತಿಹ್ಯಗಳಿಂದಲೂ ನಮಗೆ ವೀರಶೈವ ಧರ್ಮದ ಕುರುಹುಗಳು ದೊರೆಯುತ್ತವೆ.

ವೀರಶೈವ ಧರ್ಮವನ್ನು ಪಂಚಪೀಠಾಧೀಶ್ವರರಾದ ರೇಣುಕಾದಿ ಪಂಚಾಚಾರ್ಯರು ಸ್ಥಾಪಕರು ಎಂದು ಪ್ರತಿಪಾದಿಸಲಾಗುತ್ತಿದೆ.

ಪಂಚಪೀಠದಲ್ಲಿ ಶ್ರೀ ರಂಭಾಪುರಿ, ಶ್ರೀಮದ್ ಉಜ್ಜೈಯಿನಿ, ಶ್ರೀ ಕೇದಾರ, ಶ್ರೀಶೈಲ ಹಾಗೂ ಶ್ರೀ ಕಾಶಿ ಪೀಠಗಳಿವೆ. ಒಂದೊಂದು ಪೀಠಕ್ಕೂ ಒಂದೊಂದು ಗುಣ ವಿಶೇಷಗಳಿವೆ. ಶ್ರೀ ರಂಭಾಪುರಿ ಪೀಠವನ್ನು ವೀರಸಿಂಹಾಸನ ಎಂದು, ಉಜ್ಜಯಿನಿ ಪೀಠವನ್ನು ಸದ್ಧರ್ಮ ಪೀಠ ಎಂದು, ಕೇದಾರ ಪೀಠವನ್ನು ವೈರಾಗ್ಯ ಪೀಠವೆಂದು, ಶ್ರೀಶೈಲ ಪೀಠವನ್ನು ಸೂರ್ಯ ಸಿಂಹಾಸನ ಪೀಠ ಹಾಗೂ ಕಾಶಿ ಪೀಠವನ್ನು ಜ್ಞಾನ ಸಿಂಹಾಸನ ಪೀಠ ಎಂದು ಕರೆಯಲಾಗುತ್ತದೆ. ಪಂಚಪೀಠಗಳು ಆಧ್ಯಾತ್ಮದ ತಳಹದಿಯ ಮೇಲೆ ಲೋಕ ಸಂಚಾರ ಮಾಡುತ್ತಾ ಧರ್ಮ ಬೋಧನೆ ಮಾಡುತ್ತಾ ಬಂದಿವೆ. ಪೀಠಗಳನ್ನು ಗುರುಪರಂಪರೆಯ ಪೀಠಗಳು ಎಂದು ಭಕ್ತ ಪರಂಪರೆ ಕರೆಯುತ್ತದೆ. ವಿಶೇಷವಾಗಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಲ್ಲಿ ಪಂಚಪೀಠಗಳು ಭಕ್ತವರ್ಗವನ್ನು ಹೊಂದಿದೆ. ಜೊತೆಗೆ ತೆಲಂಗಾಣ, ತಮಿಳುನಾಡು ಹಾಗೂ ಕೇರಳದಲ್ಲೂ ಪಂಚಪೀಠಗಳ ಭಕ್ತರು ಇದ್ದಾರೆ.

ಪಂಚಪೀಠಗಳಲ್ಲಿ ಶ್ರೀ ಶೈಲ ಪೀಠವು ಆಂಧ್ರ ಪ್ರದೇಶದ ಶ್ರೀಶೈಲದಲ್ಲಿ ಸ್ಥಾಪನೆಗೊಂಡಿದೆ. ಶ್ರೀಪತಿ ಪಂಡಿತರಾಧ್ಯರು ಈಪೀಠದ ಮೊದಲ ಪೀಠಾಧಿಪತಿ ಎಂದು ವ್ಯಾಖ್ಯಾನಿಸಲಾಗಿದೆ.

ವೀರಶೈವಕ್ಕೆ ಲಿಂಗಾಯತ ಎಂಬ ಅಭಿನಾಮವೂ ಇದ್ದು, ವಿಶೇಷವಾಗಿ ವಿರಕ್ತ ಪರಂಪರೆಯ ಮಠಗಳು ಬಸವಣ್ಣನವರ ಕಾಯಕ ದಾಸೋಹ ತತ್ವದ ಆಧಾರಾದ ಮೇಲೆ ಸಾಮಾಜಿಕ ಸೇವೆಯಲ್ಲಿ ತೊಡಗಿವೆ ಎಂಬುದೂ ಹೆಮ್ಮೆಯ ಸಂಗತಿ. ಈ ಮಠಗಳನ್ನು ವಿರಕ್ತಮಠಗಳು ಎಂದು ಕರೆಯಲ್ಪಟ್ಟಿವೆ.

ಶ್ರೀಶೈಲ ಪೀಠ ಪರಂಪರೆಯಲ್ಲಿ ಬರುವ ಜಗದ್ಗುರುಗಳಲ್ಲಿ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಸ್ವಾಮಿಗಳವರು ಭಕ್ತಮುಖಿ, ಸಮಾಜ ಮುಖಿ ಹಾಗೂ ದೇಶಭಕ್ತಿ ಮುಖಿ ಜಗದ್ಗುರುಗಳಾಗಿರುವುದು ವಿಶೇಷ.

ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿ, ಮಹಾತ್ಮ ಗಾಂಧೀಜಿಯವರ ಅನುಯಾಯಿ ಸ್ವಾತಂತ್ರ ಸಂಗ್ರಾಮದಲ್ಲಿ ಭಾಗಿಯಾಗಿದ್ದವರು ಎಂಬುದು ಮಹತ್ತರ ಸಂಗತಿ. ಅಲ್ಲದೆ ಜಗದ್ಗುರುಗಳವರು ಗುರು-ವಿರಕ್ತರ ಸಮನ್ವಯ ಕೊಂಡಿಯಾಗಿದ್ದವರು. ಚಿತ್ರದುರ್ಗ ಬೃಹನ್ಮಠದ ಜಗದ್ಗುರುಗಳ ಒಡನಾಟದಲ್ಲಿ ಇದ್ದವರು. ಇವರ ಪೀಠಾಧ್ಯಕ್ಷರಾಗಿದ್ದ ಕಾಲದಲ್ಲಿ ಶ್ರೀಶೈಲ ಪೀಠ ಹೆಚ್ಚಿನ ಬೆಳವಣಿಗೆ ಕಂಡಿತು. ಹರಿಹರ ಮತ್ತು ದಾವಣಗೆರೆಯಲ್ಲೂ ವಿದ್ಯಾಕೇಂದ್ರ ತೆರೆದು ಈ ಭಾಗದಲ್ಲೂ ಪೀಠದ ವಿಸ್ತಾರ ಹೆಚ್ಚಿಸಿದರು. ಅಲ್ಲದೆ ತಮ್ಮ ಲಿಂಗೈಕ್ಯ ಸ್ಥಾನವನ್ನು ದಾವಣಗೆರೆಯನ್ನೇ ಆಯ್ಕೆ ಮಾಡಿಕೊಂಡು ಈ ಭಾಗದ ಭಕ್ತರ ಜನಮಾನಸದಲ್ಲಿ ಉಳಿದುಕೊಂಡರು...

ಮುಂದೆ ಶ್ರೀಶೈಲ ಪೀಠಾಧಿಪತಿಯಾಗಿ ಜಗದ್ಗುರು ಸ್ಥಾನ ಅಲಂಕಾರಿಸಿದ ಶ್ರೀ ಉಮಾಪತಿ ಪಂಡಿತಾರಾಧ್ಯ ಮಹಾಸ್ವಾಮಿಗಳವರು ಕರ್ನಾಟಕ ಹಾಗೂ ಆಂಧ್ರ ಪ್ರದೇಶಗಳಲ್ಲಿ ಶಾಖಾ ಮಠಗಳನ್ನು ಚುರುಕುಗೊಳಿಸಿ, ಧರ್ಮ ಪ್ರಚಾರಮಾಡಿದರು. ಶ್ರೀಶೈಲಕ್ಕೆ ವಿವಿಧ ರಾಜ್ಯಗಳಿಂದ ಬರುವ ಭಕ್ತರಿಗಾಗಿ ವ್ಯಾಪಕ ವಸತಿ ಅನುಕೂಲ ಮಾಡಿದರು. ಶ್ರೀಗಳ ಆಶಯಕ್ಕೆ ಸ್ಪಂದಿಸಿದ ದಾನಿ ಡಾ. ಶಾಮನೂರು ಶಿವಶಂಕರಪ್ಪ ಅವರು ತೊಂಬತ್ತರ ದಶಕದಲ್ಲೇ ಸುಸಜ್ಜಿತ ವಸತಿ ಗೃಹ



ಕಟ್ಟಿಸಿದ್ದರು. ಸಂಸದ ಸಿದ್ದೇಶ್ವರ್, ಕೊಂಡಯ್ಯ, ವಿ. ಸೋಮಣ್ಣ ಮುಂತಾದವರೂ ವಸತಿ ಗೃಹ ಕಟ್ಟಿಸಿದ್ದರು. ಶ್ರೀ ಉಮಾಪತಿ ಪಂಡಿತಾರಾಧ್ಯ ಸ್ವಾಮೀಜಿಯವರ ಲಿಂಗೈಕ್ಯ ಗದ್ದುಗೆಯೂ ದಾವಣಗೆರೆಯಲ್ಲೇ ಆಯ್ತು...

ಶ್ರೀಶೈಲ ಪೀಠದ ಇತಿಹಾಸದ ಉದ್ದಕ್ಕೂ ಪ್ರಖರ ಪಾಂಡಿತ್ಯ ಹಾಗೂ ತಪೋನಿಷ್ಠ ಸ್ವಾಮಿಗಳೇ ಪೀಠಾಧಿಪತಿಗಳಾಗುತ್ತಾ ಬಂದಿರುವುದು, ಈ ಪೀಠದ ಹಾಗೂ ಸಕಲ ವೀರಶೈವ ಧರ್ಮಿಯರ ಭಾಗ್ಯ ಎಂದರೆ ಅತಿಶಯದ ಮಾತಲ್ಲ.

ಶ್ರೀ ಉಮಾಪತಿ ಜಗದ್ಗುರಗಳ ನಂತರ ಜಗದ್ಗುರುಗಳಾಗಿ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾ ಸನ್ನಿಧಿಯವರು ಶ್ರೀಶೈಲ ಪೀಠವನ್ನು ಅಲಂಕರಿಸುತ್ತಾರೆ. ಕನ್ನಡ, ತೆಲುಗು, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪಾರಂಗತರಾದ ಶ್ರೀಗಳ ಪೂರ್ವಾಶ್ರಮದ ವಿವರಗಳೇ ಚೇತೋಹಾರಿ!

ಶ್ರೀ ಮಡಿವಾಳಯ್ಯ ಹಿರೇಮಠ ಹಾಗೂ ಮಾತೋಶ್ರೀ ಶಾರದಾ ಮಡಿವಾಳಯ್ಯ ಹಿರೇಮಠ ಪುಣ್ಯ ಗರ್ಭದಲ್ಲಿ ಜನಿಸಿದ ಶ್ರೀಗಳ ಪ್ರಾಥಮಿಕ ಶಿಕ್ಷಣದ ಜೊತೆಗೆ ಆಧ್ಯಾತ್ಮ ಶಿಕ್ಷಣ ಹಿಪ್ಪರಗಿ ಶ್ರೀ ವಿಜಯ ಮಹಾಂತೇಶ್ವರ ಶಾಲೆಯಲ್ಲಿ ಆರಂಭವಾಗುತ್ತದೆ. ಪ್ರೌಢಶಿಕ್ಷಣ ಹಾಗೂ ಯೋಗಾಭ್ಯಾಸ, ಸಂಸ್ಕೃತ ಹಾಗೂ ಆಧ್ಯಾತ್ಮ ಅಧ್ಯಯನವು ಶಿವಯೋಗ ಮಂದಿರದ ಕುಮಾರೇಶ್ವರ ಶಾಲೆಯಲ್ಲಿ ನಡೆಯುತ್ತದೆ. ಶ್ರೀಗಳ ಅಭ್ಯಾಸದ ಕ್ರಮ, ಚುರುಕುತನ ಹಾಗೂ ಶಿಸ್ತನ್ನು ಗಮನಿಸಿದ ಅಲ್ಲಿನ ಅಧ್ಯಾಪಕ ವರ್ಗ ಈ ಬಾಲಕ 'ಮುಂದೆ ಪ್ರಖಾಂಡ ಪಂಡಿತನಾಗಿ' ಪೀಠಾಧಿಪತಿಗಳಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಭವಿಷ್ಯ ನುಡಿಯುತ್ತಾರೆ.

ಶ್ರೀಗಳು 1987ರಲ್ಲಿ ಶ್ರೀ ಶಿವಯೋಗ ಮಂದಿರದಲ್ಲಿ ತಮ್ಮ ಕಲಿಕೆಯನ್ನು ಮುಗಿಸಿ ಕಾಶಿ ಜಂಗಮವಾಡಿ ಮಠಕ್ಕೆ ಉನ್ನತ ವಿದ್ಯಾಭ್ಯಾಸಕ್ಕಾಗಿ ತೆರಳುತ್ತಾರೆ. ಅಲ್ಲಿನ ಆದರ್ಶ ಶ್ರೀಸಾಂಗ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಉತ್ತಮ, ಮಧ್ಯಮ, ಹಾಗೂ ಪದವಿ ಪೂರ್ವ ಶಿಕ್ಷಣ ಅಭ್ಯಾಸ ಮಾಡಿ, ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದುತ್ತಾರೆ. ನಂತರದಲ್ಲಿ ಸಂಪೂರ್ಣಾನಂದ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಯನ್ನು, ಶಕ್ತಿ ವಿಶಿಷ್ಟಾದ್ವೈತ ವಿಷಯದಲ್ಲಿ ಪದವಿ ಪಡೆದು ವಿಶ್ವವಿದ್ಯಾನಿಲಯಕ್ಕೆ ಪ್ರಥಮರಾಗಿ 'ಸ್ವರ್ಣ ಪದಕ' ಪಡೆಯುತ್ತಾರೆ. ಇದು ಶ್ರೀಗಳವರ ಮಹತ್ತರ ಸಾಧನೆ..

ಶ್ರೀಗಳವರ ಅಧ್ಯಯನ ದಾಹ ಇಲ್ಲಿಗೇ ಮುಗಿಯುವುದಿಲ್ಲ. 2002ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಪ್ರಖಾಂಡ ಪಂಡಿತರಾದ ಡಾ. ಸುಧಾಂಶು ಶೇಖರ ಶಾಸ್ತ್ರೀಜಿ ಅವರ ಮಾರ್ಗದರ್ಶನದಲ್ಲಿ 'ಶ್ರೀಮದ್ ಭಗವದ್ಗೀತಾ ಮತ್ತು ಸಿದ್ಧಾಂತ ಶಿಖಾಮಣಿ ಒಂದು ತೌಲನಿಕ ಸಮೀಕ್ಷೆ' ವಿಷಯದಲ್ಲಿ ಪಿ.ಹೆಚ್.ಡಿ. ಪದವಿ ಪಡೆದು ತಮ್ಮ ಆಧ್ಯಾತ್ಮ ಮತ್ತು ಧಾರ್ಮಿಕ ವಿದ್ವತ್ತನ್ನು ಪ್ರದರ್ಶಿಸುತ್ತಾರೆ.

ಚಿಕ್ಕವರಿದ್ದಾಗಲೇ ಮಾನಸಿಕವಾಗಿ 'ಸಹಜ ಸನ್ಯಾಸ' ಪಡೆದುಕೊಂಡು ಬೆಳೆದ ಶ್ರೀಗಳವರು 2003ರಲ್ಲಿ 'ಹಿಪ್ಪರಗಿ' ಹಿರೇಮಠದ ಅಧಿಕಾರ ಸ್ವೀಕಾರ ಮಾಡುತ್ತಾರೆ. ಸೊಲ್ಲಾಪುರದ ತಪೋರತ್ನ ಶ್ರೀ ಷ.ಬ್ರ. ಯೋಗಿರಾಜೇಂದ್ರ ಶಿವಾಚಾರ್ಯರು ಶ್ರೀಗಳವರು ಪಟ್ಟಾಧಿಕಾರ ವಹಿಸಿಕೊಂಡಿರುತ್ತಾರೆ.

ಇಲ್ಲಿಂದ ಮುಂದೆ ಶ್ರೀಗಳವರು ಧಾರ್ಮಿಕ-ಆಧ್ಯಾತ್ಮಿಕ ಪ್ರವಚನಗಳ ಜೊತೆಗೆ ಎಲ್ಲಾ ಧರ್ಮ-ಜನಾಂಗದ ಬಡ ಮಕ್ಕಳಿಗಾಗಿ ಶಾಲಾ-ಕಾಲೇಜು ತೆರೆಯುತ್ತಾರೆ. ಪ್ರಸಾದ ನಿಲಯ ಸ್ಥಾಪಿಸುತ್ತಾರೆ. ಇವುಗಳ ಜೊತೆಗೆ ವಿದ್ಯಾರ್ಥಿ ಯುವಜನರಿಗೆ ಯೋಗಾಭ್ಯಾಸದ ತರಬೇತಿ, ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ನಿರಂತರವಾಗಿ ನಡೆಸುತ್ತಾ ಬರುತ್ತಾರೆ.

ಶ್ರೀಗಳವರಿಗೆ 2008ರಲ್ಲಿ ಮತ್ತೊಂದು ದೊಡ್ಡ ಜವಾಬ್ದಾರಿ ಹೆಗಲಿಗೆ ಬೀಳುತ್ತದೆ. ಶ್ರೀ ನಿಡಸೋಸಿ ಮಹಾ ಸ್ವಾಮಿಗಳ ಹಾಗೂ ಪಂಚಪೀಠಾಧೀಶ್ವರರ ದಿವ್ಯ ಸಾನ್ನಿಧ್ಯದಲ್ಲಿ ಯಡೂರು ಶ್ರೀ ಕಾಡಸಿದ್ದೇಶ್ವರ ಸಂಸ್ಥಾನ ಮಠ ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಜವಾಬ್ದಾರಿ ವಹಿಸಲಾಗುತ್ತದೆ.

ಶ್ರೀಗಳು ಇಲ್ಲಿಯೂ ಸಹ ಕ್ರಿಯಾಶೀಲರಾಗಿ ಕಡಿಯುವ ನೀರಿನ ವ್ಯವಸ್ಥೆಯಿಂದ ಮಠದ ಜೀರ್ಣೋದ್ಧಾರಕ್ಕೆ ಇಳಿಯುತ್ತಾರೆ. ಇಲ್ಲಿ ಬರುವ ಭಕ್ತರ ವಸತಿಗಾಗಿ ಎಪ್ಪತ್ತೆರಡು ಕೊಠಡಿಗಳುಳ್ಳ ವಸತಿ ಗೃಹ ಕಟ್ಟಿಸುತ್ತಾರೆ. ಎರಡೆರೆಡು ಮಠಗಳ ಜವಾಬ್ದಾರಿಯನ್ನು ದಣಿವರಿಯದೆ ಒಟ್ಟೊಟ್ಟಿಗೇ ನಿಭಾಯಿಸುತ್ತಾರೆ.

ಶ್ರೀಗಳವರ ಈ ಎಲ್ಲಾ ಕ್ರಿಯಾಶೀಲ ಚಟುವಟಿಕೆ ಹಾಗೂ ತಪೋನಿಷ್ಠತೆಯನ್ನು ಗಮನಿಸುತ್ತಲೇ ಇದ್ದ ಶ್ರೀಶೈಲ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಜಗದ್ಗುರುಗಳು, ಇವರೇ ನಮ್ಮ ಪೀಠದ ಉತ್ತರಾಧಿಕಾರಿಯಾಗಲು ಸೂಕ್ತ ಎಂಬ ನಿರ್ಧಾರಕ್ಕೆ ಬರುತ್ತಾರೆ. ತಮ್ಮ ಮನೋ ಇಂಗಿತದಂತೆ 2010 ಫೆಬ್ರವರಿ 2ರಂದು ತಮ್ಮ ಉತ್ತರಾಧಿಕಾರಿಯನ್ನಾಗಿ ಪೀಠದ ಸಕಲ ಭಕ್ತಾದಿಗಳು ಹಾಗೂ ಪಂಚಪೀಠಾಧೀಶ್ವರರ ಸಮ್ಮುಖದಲ್ಲಿ ಪಟ್ಟಾಧಿಕಾರ ನೀಡುತ್ತಾರೆ. ಈಗಲೂ ವೇದಾಂತ, ಉಪನಿಷತ್, ಸಿದ್ಧಾಂತ ಶಿಖಾಮಣಿ ವಿಷಯಗಳಲ್ಲಿ ಪ್ರವಚನ ಮುಂದುವರಿಸಿದ್ದಾರೆ.

ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು ಅನೇಕ ಧಾರ್ಮಿಕ ಕೃತಿಗಳನ್ನು ರಚಿಸಿದ್ದಾರೆ. ನೂರಾರು ಪ್ರವಚನಗಳನ್ನು ನೀಡಿದ್ದಾರೆ. ಈಗಲೂ ವೇದಾಂತ, ಉಪನಿಷತ್, ಸಿದ್ಧಾಂತ ಶಿಖಾಮಣಿ ವಿಷಯಗಳಲ್ಲಿ ಪ್ರವಚನ ಮುಂದುವರಿಸಿದ್ದಾರೆ.

**ಶ್ರೀಗಳವರ ಸಾಹಿತ್ಯ ಕೃತಿಗಳಲ್ಲಿ ಪ್ರಮುಖವಾದವುಗಳು :** ಚಿಕ್ಕೇನಕೊಪ್ಪದ ವೀರಶೈವ ನುಡಿಮುತ್ತುಗಳು, ಕನ್ನಡದಿಂದ ಸಂಸ್ಕೃತ ಅನುವಾದ. ಶ್ರೀ ಕಾಶಿ ಜಗದ್ಗುರುಗಳವರ 'ಸಿದ್ಧಾಂತ ಶಿಖಾಮಣಿ' ಕುರಿತಾದ ಉಪನ್ಯಾಸಗಳ ಗ್ರಂಥ ಸಂಪಾದನೆ. ಇವುಗಳಲ್ಲಿ ಶರಣಸ್ಥಲ ಕೂಡಾ ಸೇರಿದೆ. ಕಾಶೀ ಜಗದ್ಗುರುಗಳ ಪಿ.ಹೆಚ್.ಡಿ. ಗ್ರಂಥದ ಕನ್ನಡ ಅನುವಾದ, 'ಷಟ್‌ಸ್ಥಲ ಚಿಂತನೆ ಗ್ರಂಥ, ಭಗವದ್ಗೀತೆ- ಸಿದ್ಧಾಂತ ಶಿಖಾಮಣಿ ಮೀಮಾಂಸೆ' ಸಂಸ್ಕೃತ ಭಾಷೆಯಲ್ಲಿ. ಶೈವಾಗಮನದಲ್ಲಿ ಮಹಿಳೆ, ಸಿದ್ಧಾಂತ ಶಿಖಾಮಣಿ; ಒಂದು ಅವಲೋಕನ, ಸಿದ್ಧಾಂತ ಶಿಖಾಮಣಿ ಮತ್ತು ಸಾಮಾಜಿಕ ಮೌಲ್ಯಗಳು, 'ವೀರಶೈವ ನಿಲುವು ಮತ್ತು ಭಗವದ್ಗೀತೆ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾ ಸನ್ನಿಧಿಯವರು ಪಟ್ಟಾಧಿಕಾರವಾಗಿ ಹನ್ನೆರಡು ವರ್ಷ ತುಂಬಿ, ವರ್ಧಂತಿ ಮಹೋತ್ಸವ... ಅದರ ಜೊತೆ-ಜೊತೆಗೆ ಜಗದ್ಗುರುಗಳವರ ಜನ್ಮದಿನದ ಸುವರ್ಣ ಮಹೋತ್ಸವ ಕೂಡಾ ಈಗಲೇ ಕೂಡಿ ಬಂದಿರುವುದು ಯೋಗಾಯೋಗ...! ಇದು ಪೀಠದ ಭಕ್ತರಿಗೆ ಹಾಗೂ ಸಮಾಜಕ್ಕೆ ಸಂಭ್ರಮ ತಂದಿದೆ.

ಇದರ ಜೊತೆಗೆ ಲಿಂಗೈಕ್ಯರಾದ ಶ್ರೀ ವಾಗೀಶ ಪಂಡಿತಾರಾಧ್ಯ ಜಗದ್ಗುರುಗಳವರ ಹಾಗೂ ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯಾರಾಧನಾ ಮಹೋತ್ಸವ ಮಹೋತ್ಸವ ಇದೇ ತಿಂಗಳ 5,6,7 ನಡೆಯಲಿವೆ. ಅಲ್ಲದೇ ಶ್ರೀ ಕಾಶಿ ನೂತನ ಜಗದ್ಗುರುಗಳವರ ದಾವಣಗೆರೆ ಪುರ ಪ್ರವೇಶ ಕಾರ್ಯಕ್ರಮಗಳನ್ನು ಭಕ್ತಾದಿಗಳು ಹಮ್ಮಿಕೊಂಡಿದ್ದಾರೆ. ಶ್ರೀ ಉಜ್ಜಯಿನಿ ಜಗದ್ಗುರು ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾ ಸನ್ನಿಧಿಯವರೂ ಸಹ ಈ ಆರಾಧನಾ ಮಹೋತ್ಸವದಲ್ಲಿ ಭಾಗಿಯಾಗಲಿದ್ದಾರೆ.

**ಸ್ಥಳ :** ವಿನೋಬನಗರದಲ್ಲಿರುವ ದಿ ದಾವಣಗೆರೆ- ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯಲಿದೆ.

## ಬಿಜೆಪಿಗೆ ರಾಷ್ಟ್ರವಾದ, ಹಿಂದುತ್ವಗಳೇ ಆತ್ಮ

**(1ನೇ ಪುಟದಿಂದ)** ಯೋಜನೆ ಜಾರಿಗೆ ತಂದ ನಿಯತ್ತು ನಮಗಿದೆ ಎಂದು ರವಿ ತಿಳಿಸಿದರು.

ಎಸ್.ಟಿ. ಸಮುದಾಯ ಸಾವಿರಾರು ವರ್ಷಗಳಿಂದ ದೇಶಕ್ಕೆ ಕೊಡುಗೆ ನೀಡುತ್ತಾ ಬಂದಿದೆ. ರಾಮಾಯಣವನ್ನು ಜನಮಾನಸಕ್ಕೆ ತಲುಪಿದ ವಾಲ್ಮೀಕಿ, ಹೋರಾಟಗಾರರಾದ ಸುರಪುರ ಲಕ್ಷ್ಮಣ, ಮದಕರಿ ನಾಯಕ, ವೆಂಕಟಪ್ಪ ನಾಯಕ ಮುಂತಾದವರು ಕೊಟ್ಟ ಕೊಡುಗೆಗಳನ್ನು ಎಂದೂ ಮರೆಯಲಾಗದು ಎಂದವರು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಬಿಜೆಪಿ ಎಂದರೆ ಮೇಲ್ವರ್ಗದ ಪಕ್ಷ ಎನ್ನುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಇತರೆ ಹಿಂದುಳಿದ ವರ್ಗದವರೂ ಸೇರಿದಂತೆ ಎಲ್ಲರ ಬೆಂಬಲದಿಂದ ಪಕ್ಷ ಬೆಳೆಯುತ್ತಿದೆ ಎಂದರು.

ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆ ಕಡೆ ಕಾರ್ಯಕರ್ತರು ಗಮನ ಹರಿಸಬೇಕು. ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರಚಾರ ಮಾಡಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕು ಎಂದು ಕರೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ ಮಾತನಾಡಿ, ಪ್ರತಿ ಜಿಲ್ಲೆಯಲ್ಲೂ ಬಿಜೆಪಿಯಿಂದ ಜನೋತ್ಸವ ಸಮಾವೇಶಗಳನ್ನು ಆಚರಿಸಲಾಗುವುದು. ಮುಂದಿನ ತಿಂಗಳು ದಾವಣಗೆರೆಯಲ್ಲಿ ನಡೆಯಲಿರುವ ಸಮಾವೇಶ ಐತಿಹಾಸಿಕವಾಗಿರಲಿದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಬಿಜೆಪಿ ರಾಜ್ಯ ಕಾರ್ಯದರ್ಶಿ ಮಹೇಶ್ ಟೆಂಗಿನಕಾಯಿ ಮಾತನಾಡಿದರು. ಎಸ್.ಟಿ. ಮೋರ್ಚ ರಾಜ್ಯಾಧ್ಯಕ್ಷ ತಿಪ್ಪರಾಜು ಹವಾಲ್ದಾರ್ ಅವರು ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಶಾಸಕರಾದ ಎಸ್.ಎ. ರವೀಂದ್ರನಾಥ್, ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ. ಲಿಂಗಣ್ಣ, ಪರಿಷತ್ ಸದಸ್ಯ ಕೆ.ಎಸ್. ನವೀನ್, ಎಸ್.ಟಿ. ಮೋರ್ಚ ಉಪಾಧ್ಯಕ್ಷರಾದ ಸತ್ಯನಾರಾಯಣ ರೆಡ್ಡಿ, ಗಂಗಾಧರ ನಾಯ್ಕ, ಬಿಜೆಪಿ ರಾಜ್ಯ ಕಾರ್ಯದರ್ಶಿ ಸುಧಾ ಜಯರುದ್ರೇಶ, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಮುಖಂಡರಾದ ಸೊಕ್ಕೆ ನಾಗರಾಜ, ಬಿ.ಎಸ್. ಜಗದೀಶ್, ಮಜುನಾಥ ಓಲೇಕಾರ್, ಶ್ರೀನಿವಾಸ ದಾಸಕರಿಯಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಭಾರತ್ ಜೋಡೋ ಅಲ್ಲ ಕಾಂಗ್ರೆಸ್ ಜೋಡೋ

**(1ನೇ ಪುಟದಿಂದ)** ಕಾಂಗ್ರೆಸ್‌ನಲ್ಲಿ ಕೆಲಸ ಮಾಡಿದ ನಾಯಕರೇ ಪಕ್ಷ ಬಿಟ್ಟು ಹೋಗುತ್ತಿದ್ದಾರೆ. ಮೊದಲು 'ಕಾಂಗ್ರೆಸ್ ಜೋಡೋ' ಮಾಡಿ ಎಂದು ಅವರೆಲ್ಲರೂ ಒತ್ತಾಯಿಸುತ್ತಿದ್ದಾರೆ ಎಂದು ರವಿ ತಿಳಿಸಿದರು. 'ಭಾರತ್ ಜೋಡೋ' ಎನ್ನಲು ಕಾಂಗ್ರೆಸ್‌ಗೆ ನೈತಿಕತೆ ಇಲ್ಲ. ಜಾತಿ, ಪ್ರಾದೇಶಿಕತೆ, ಮತ ಬ್ಯಾಂಕ್ ಆಧಾರದ ಮೇಲೆ ದೇಶವನ್ನು ಕಾಂಗ್ರೆಸ್ ಒಡೆದಿದೆ. ನಾಯಕರು ಏಕೆ ಕಾಂಗ್ರೆಸ್ ಬಿಟ್ಟು ಹೋಗುತ್ತಿದ್ದಾರೆ? 'ಕಾಂಗ್ರೆಸ್ ಜೋಡೋ' ಕಾರ್ಯಕ್ರಮಕ್ಕೆ ಕಾಂಗ್ರೆಸ್ಸಿಗರೇ ಏಕೆ ಮುಂದಾಗಿದ್ದಾರೆ? ಎಂಬುದನ್ನು ಅವರೇ ಯೋಚಿಸಬೇಕು ಎಂದು ರವಿ ಹೇಳಿದರು.

ಕೆಲ ಮುಖಂಡರು ಬಿಜೆಪಿಯಿಂದ ಕಾಂಗ್ರೆಸ್‌ಗೆ ಹೋಗುತ್ತಿರುವ ಪ್ರಶ್ನೆಗೆ ಉತ್ತರಿಸಿದ ಅವರು, ರಾಜಕೀಯದಲ್ಲಿ ಧೃವೀಕರಣ ನಿರಂತರವಾಗಿ ನಡೆಯುತ್ತದೆ. ಆದರೆ, ಬಿಜೆಪಿಗೆ ಬಂದವರ ಭವಿಷ್ಯ ಗಟ್ಟಿಯಾಗಿದ್ದರೆ, ಕಾಂಗ್ರೆಸ್‌ಗೆ ಹೋದವರಿಗೆ ಭವಿಷ್ಯವೇ ಇಲ್ಲದೇ ಅತಂತ್ರರಾಗಿದ್ದಾರೆ ಎಂದರು.

ಚುನಾವಣಾ ಉದ್ದೇಶದಿಂದಲೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ರಾಜ್ಯಕ್ಕೆ ಬರುತ್ತಿದ್ದಾರೆ ಎಂಬ ವರದಿಗಳನ್ನು ತಳ್ಳಿ ಹಾಕಿದ ಅವರು, ಮೋದಿ ಕಾಯಕ ಯೋಗಿ. ಅವರು ದೇಶದ ಉದ್ದಗಲಕ್ಕೂ ಪ್ರವಾಸ ಮಾಡುತ್ತಿದ್ದಾರೆ. ಬಿಜೆಪಿ ಬಲ ಇರುವ ಹಾಗೂ ಇಲ್ಲದಿರುವ ಎಲ್ಲ ರಾಜ್ಯಗಳಿಗೆ ಹೋಗುತ್ತಿದ್ದಾರೆ. ಅವರು ದೇಶ ಬಲಪಡಿಸುವ ಕಾರ್ಯ ಮಾಡುತ್ತಿದ್ದಾರೆ ಎಂದರು.

ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿರುವ ಅಂಶಗಳನ್ನು ಜಾರಿಗೆ ತಂದಿಲ್ಲ ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಆರೋಪಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಅವರ ಪ್ರಣಾಳಿಕೆಗೂ ನಮಗೂ ಸಂಬಂಧ ಇಲ್ಲ. ನಾವು ನಮ್ಮ ಪ್ರಣಾಳಿಕೆ ಈಡೇರಿಸುತ್ತಿದ್ದೇವೆ ಎಂದರು.

## ರಾಜ್ಯ ಸರ್ಕಾರಿ ನೌಕರರ ದಿನಾಚರಣೆ

**(1ನೇ ಪುಟದಿಂದ)** ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಾಕ್ಷರಿ ಸೇರಿದಂತೆ ಸಂಘದ ಪದಾಧಿಕಾರಿಗಳು ಈ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ದಿನಾಂಕ 6 ರಂದು ಬೆಳಿಗ್ಗೆ 11ಕ್ಕೆ ವಿಧಾನಸೌಧದ ಔತಣ ಸಭಾಂಗಣದಲ್ಲಿ ನಡೆಯಲಿರುವ ಈ ಸಮಾರಂಭಕ್ಕೆ ಹಾಜರಾಗುವ ಸರ್ಕಾರಿ ನೌಕರರಿಗೆ ಅರ್ಧ ದಿನದ ವಿಶೇಷ ಸಾಂದರ್ಭಿಕ ರಜೆಯ ಸೌಲಭ್ಯವನ್ನೂ ಕಲ್ಪಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಮನೆಕೆಲಸದವರ ರಕ್ಷಣೆಗೆ ಕಾನೂನು

**(1ನೇ ಪುಟದಿಂದ)** ಮನೆಕೆಲಸದವರು ನೀಡುವ ದೂರುಗಳನ್ನು ಈ ಸಮಿತಿ ಪರಿಶೀಲಿಸಬೇಕಿದೆ. ಜಿಲ್ಲಾಧಿಕಾರಿಗಳು ಸ್ವಯಂ ಚಾಲಿತವಾಗಿ ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಆದರೆ, ಎಷ್ಟೋ ಜಿಲ್ಲಾಧಿಕಾರಿಗಳಿಗೆ ತಮ್ಮ ಹೊಣೆಗಾರಿಕೆಯ ಬಗ್ಗೆ ತಿಳಿದಿರುವುದಿಲ್ಲ ಎಂದು ಸೆಂಟರ್ ಫಾರ್ ಸೋಶಿಯಲ್ ರೀಸರ್ಚ್‌ನ ಮಾನಸಿ ಮಿಶ್ರ ಅಭಿಪ್ರಾಯ ಪಟ್ಟಿದ್ದಾರೆ.

ದೇಶದಲ್ಲಿ 40 ಲಕ್ಷ ಮನೆಕೆಲಸದವರಿದ್ದಾರೆ. ಇವರಲ್ಲಿ ಮೂರನೇ ಎರಡರಷ್ಟು ಮಹಿಳೆಯರು ಎಂದು ಎನ್.ಎಸ್.ಎಸ್.ಓ. ಸಮೀಕ್ಷೆ ವರದಿ ತಿಳಿಸಿದೆ.


### ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : **ಪ್ರಿಯಾಂಕ ಜೆ.ಪಿ., ಇಂಜಿನಿಯರ್**

**+91 70190 70400**

**8ನೇ ಮೇನ್, 8ನೇ ಕ್ರಾಸ್, ಬ್ಯಾಡಗಿ ಶೆಟ್ರು ಸ್ಕೂಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ-4.**


### ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯನಗರ ಜಿಲ್ಲೆಯ, ಹರಪನಹಳ್ಳಿ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯ ಅಧಿಕೃತ ಸರ್ಕಾರಿ ಕೆಲಸ ಕಾರ್ಯಗಳಿಗಾಗಿ ಒಂದು ವರ್ಷದ ಅವಧಿಗೆ ಅಂದರೆ 2022-23ನೇ ಸಾಲಿಗೆ, ಹೊರಗುತ್ತಿಗೆ ಆಧಾರದ ಮೇಲೆ ಚಾಲಕ ಸಹಿತ ವಾಹನಗಳನ್ನು ಒದಗಿಸಲು ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮಾನ್ಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ನಿರ್ದೇಶನದಂತೆ, ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಪ್ರವಾಸೋದ್ಯಮ ಇಲಾಖೆಯಿಂದ ಸಹಾಯಧನ ಮೂಲಕ ವಾಹನ ಪಡೆದ ಪ.ಜಾತಿ ಹಾಗೂ ಪ.ಂಗಡದ ಫಲಾನುವಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು.

| | |
|---|---|
| 01) ಟೆಂಡರ್ ಅರ್ಜಿಗಳನ್ನು ವಿತರಣೆ ಮಾಡುವ ದಿನಾಂಕ : | ದಿನಾಂಕ : 05.09.2022 |
| 02) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ | ದಿನಾಂಕ : 20.09.2022 ಮಧ್ಯಾಹ್ನ 3.00 ಗಂಟೆ |
| 03) ತಾಂತ್ರೀಕ ಬಿಡ್ ತೆರೆಯುವ ದಿನಾಂಕ | ದಿನಾಂಕ : 20.09.2022 ಮಧ್ಯಾಹ್ನ 4.30 ಗಂಟೆ |
| 04) ಆರ್ಥಿಕ ಬಿಡ್ ತೆರೆಯುವ ದಿನಾಂಕ | ದಿನಾಂಕ : 20.09.2022 ಸಂಜೆ 5.00 ಗಂಟೆ |
| 05) ಅರ್ಜಿ ಶುಲ್ಕ (ರೂ.) | ಉಚಿತ |
| 06) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ.) | ರೂ. 480000/- |
| 07) ಪಾವತಿಸಬೇಕಾದ ಇ.ಎಂ.ಡಿ. ಮೊತ್ತ (ರೂ) | ರೂ. 10000/- |
| 08) ಅರ್ಜಿ ದೊರೆಯುವ ಸ್ಥಳ | ಸಹಾಯಕ ನಿರ್ದೇಶಕರು (ಗ್ರೇಡ್-1), ಸಮಾಜ ಕಲ್ಯಾಣ ಇಲಾಖೆ, ಹಳೇ ತಾಲ್ಲೂಕು ಕಛೇರಿ ಆವರಣ, ಹರಪನಹಳ್ಳಿ ತಾಲ್ಲೂಕು. |

ಸಹಿ/- ಸಹಾಯಕ ನಿರ್ದೇಶಕರು
ಗ್ರೇಡ್-1, ಸಮಾಜ ಕಲ್ಯಾಣ ಇಲಾಖೆ, ಹರಪನಹಳ್ಳಿ.

### ಸಾರ್ವಜನಿಕ ಪ್ರಕಟಣೆ

ಶ್ರೀ ಬೀರಲಿಂಗಪ್ಪ ಬಿ. ಬಿನ್. ರೇವಣಸಿದ್ದಪ್ಪ ಇವರಿಗೆ ಸೇರಿದ ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯತಿಗೆ ದಾಖಲಾಗಿರುವ ನಂತರ ದಾವಣಗೆರೆ ಮಹಾನಗರಪಾಲಿಕೆಯಲ್ಲಿ ಸೇರ್ಪಡೆಯಾಗಿರುವ ಸರಸ್ವತಿ ಬಡಾವಣೆಯ ಬಿ ಬ್ಲಾಕ್‌ನಲ್ಲಿ ಬರತಕ್ಕ ಪ್ಲಾನ್‌ನಲ್ಲಿ ಕಂಡ ಸೈಟಗಳ ಪೈಕಿ ನಂ.1 ಇದರ ಅಳತೆ ನಂ. ಯಾನೆ ಆಸ್ತಿ ನಂ. 548/1 ಅಳತೆ : (62.55)/2x(36.6+9)/2 ಅಡಿವುಳ್ಳ ನಿವೇಶನದ ಪೈಕಿ ಪಶ್ಚಿಮ ದಿಕ್ಕಿನ ಉತ್ತರ ಭಾಗದ ಕಡೆಯ ಅಳತೆ (8+17.5)/2 ಅಡಿ 69.57 ಚದುರಡಿ ವಜಾ ಜಾತ ಉಳಿದ ದಾವಣಗೆರೆ ಮಹಾನಗರಪಾಲಿಕೆಯ ಚಾಲ್ತಿ ನಂ. 548/1 ಅಳತೆ : (62.55)/2x(28.6+9)/2 ಅಡಿವುಳ್ಳ ಜಾಗ.

ದಾವಣಗೆರೆ ತಾಲ್ಲೂಕು ಕಸಭಾ ಹೋಬಳಿ, ನಿಟ್ಟುವಳ್ಳಿ ಗ್ರಾಮದ ರಿ.ಸ.ನಂ.13/1 ರ ಶಿರಮಗೊಂಡನಹಳ್ಳಿ ಪಂಚಾಯತಿ ಡೋರ್ ನಂಬರ್ ದಾಖಲಾತಿ ದಾವಣಗೆರೆ ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿರುವ ಸರಸ್ವತಿ ಬಡವಾಣೆ ಬಿ ಬ್ಲಾಕ್‌ನಲ್ಲಿ ಬರತಕ್ಕ ಪ್ಲಾನ್‌ನಲ್ಲಿ ಕಂಡ ಸೈಟುಗಳ ಪೈಕಿ ಸೈಟ್ ನಂ. 20, #779/3 ಅಳತೆ :(23+44)/2x50 ಅಡಿ = 1675 ಚದುರಡಿ ಉಳಿದ ನಿವೇಶನಗಳ ಪೈಕಿ ಪೂರ್ವ ದಿಕ್ಕಿನ ದಕ್ಷಿಣ ಭಾಗದ ಕಡೆಯ ದಾವಣಗೆರೆ ಮಹಾನಗರ ಪಾಲಿಕೆಯ ಚಾಲ್ತಿ ಡೋರ್ ನಂ. 779/3/20ಎ ಅಳತೆ : (15+32.8)/2 ಅಡಿ : 244.64 ಚದುರಡಿವುಳ್ಳ ಜಾಗ. ಈ ಮೇಲ್ಕಂಡ ಎರಡು ಜಾಗಗಳು ಒಂದಕ್ಕೊಂದು ಲಗತ್ತಾಗಿದ್ದು, ಒಟ್ಟು 1344.44 ಚದುರಡಿವುಳ್ಳ ನಿವೇಶನಕ್ಕೆ ಚಕ್ಕುಬಂದಿ :ಪೂರ್ವಕ್ಕೆ ಸೈಟ್ ನಂ. 24 & 21, ಪಶ್ಚಿಮಕ್ಕೆ : 40 ಅಡಿವುಳ್ಳ ಅಗಲದ ರಸ್ತೆ, ಉತ್ರಕ್ಕೆ ರಿ.ಸ.ನಂ. 13/1ರಲ್ಲಿ ವಿಂಗಡಿಸಿರುವ ಸೇಟ್ ನಂ. 20ರಲ್ಲಿ ಶ್ರೀ ರಾಮಲಿಂಗಪ್ಪ.ಎನ್ ಅರಳಗುಪ್ಪಿ ಬಿನ್ ನಾಗಪ್ಪ ಅರಳಗುಪ್ಪಿ ಇವರ ಸ್ವತ್ತು, ದಕ್ಷಿಣಕ್ಕೆ : ಸೈಟ್ ನಂ. 2 ಈ ಮೇಲ್ಕಂಡ ಚಕ್ಕುಬಂದಿ ಮಧ್ಯದ ಸ್ವತ್ತು.

ಈ ಮೇಲ್ಕಂದ ಆಸ್ತಿಯನ್ನು ಖರೀದಿ ಮಾಡುತ್ತಿದ್ದೇನೆ. ಯಾವುದಾದರೂ ತಂಟೆ ತಕರಾರು ಇದ್ದಲ್ಲಿ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನದೊಳಗೆ ಆಕ್ಷೇಪಣೆಗಳನ್ನು ಈ ಕೆಳಗಿನ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು. ಒಂದು ವೇಳೆ ಯಾವುದೇ ರೀತಿ ತಂಟೆ ತಕರಾರು ಬಾರದಿದ್ದಲ್ಲಿ ಯಾರದು ತಕರಾರುಗಳು ಇಲ್ಲವೆಂದು ಪರಿಗಣಿಸಿ ಶುದ್ಧ ಕ್ರಯ ಪತ್ರ ಮಾಡಿಕೊಳ್ಳುತ್ತೇವೆ.

ದಿನಾಂಕ : 3.9.2022 **(ಜಿ.ಶಾಂತಬಾಯಿ)**
ಸ್ಥಳ : ದಾವಣಗೆರೆ. **ಮೊ : 96636 08611 / 94825 70068**

### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಸುಮಾರು 64 ವರ್ಷದ ಶ್ರೀ ಶಿವಪ್ಪ ಹಳ್ಳಳ್ಳಿ ಬಿನ್ ಹಾಲಪ್ಪ ಹೆಚ್. ಆಧಾರ್ ನಂ. 8067, 8051 2371 ಮೊ.ನಂ. 9902122807 ಮತ್ತು ಸುಮಾರು 52 ವರ್ಷದ ಶ್ರೀಮತಿ ರತ್ನಮ್ಮ ಹಳ್ಳಳ್ಳಿ ಕೋಂ ಶಿವಪ್ಪ ಹಳ್ಳಳ್ಳಿ, ಆಧಾರ್ ನಂ. 2561 4239 0591 ಮೊ. ನಂ. 9483386075 ವಾಸ : ಸತ್ತೂರು ಗ್ರಾಮ, ಅರಸೀಕೆರೆ ಹೋಬಳಿ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ ಆದ ಇವರ ಪರವಾಗಿ ಸಾರ್ವಜನಿಕರಿಗ ತಿಳಿಯಪಡಿಸುವುದೇನೆಂದರೆ :

ನನ್ನ ಕಕ್ಷಿದಾರರು ಕೆಳಕಂಡ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾವಣಗೆರೆ ಜಿಲ್ಲಾ, ದಾವಣಗೆರೆ ತಾಲ್ಲೂಕು, ಕಸಬಾ ದಾವಣಗೆರೆ ಸಿಟಿ, ವಾಟರ್ ಟ್ಯಾಂಕ್ ಹತ್ತಿರ ನರಸರಾಜ ಪೇಟೆ, 4ನೇ ಕ್ರಾಸ್ ಡೋ ನಂ. # 310 ರಲ್ಲಿ ವಾಸವಾಗಿರುವ ಜಿರಾಯ್ತಿ ಸುಮಾರು 40 ವರ್ಷದ ಶ್ರೀ ಆಸೀಫ್ ಉಲ್ಲಾ ಬಿನ್ ವಿ. ಅಬ್ದುಲ್ ರಹೀಮ್ ಆಧಾರ್ ನಂ. 3338 3211 8103 ಆದ ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಸದರಿ ಷೆಡ್ಯೂಲ್ ಆಸ್ತಿಗಳ ಬಗ್ಗೆ ಸಾರ್ವಜನಿಕರು ಯಾರೇ ಆಗಲಿ ತಂಟೆ ತಕರಾರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇದ್ದಲ್ಲಿ, ಈ ಪ್ರಕಟಣೆ ಪ್ರಕಟಗೊಂಡ ದಿನಾಂಕದಿಂದ 7 ದಿನಗಳೊಳಗಾಗಿ ಈ ಕೆಳಕಂಡವರನ್ನಾಗಲಿ ಅಥವಾ ನಮ್ಮ ಕಕ್ಷಿದಾರರನ್ನಾಗಲಿ ಸೂಕ್ತ ದಾಖಲೆಗಳಒಂದಿಗೆ ಸಂಪರ್ಕಿಸತಕ್ಕದ್ದು. 7 ದಿನದೊಳಗಾಗಿ ಯಾವುದೇ ರೀತಿಯ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಆಸ್ತಿಗಳನ್ನು ತಮ್ಮ ಹೆಸರಿಗೆ ಹರಪನಹಳ್ಳಿ ಉಪ ನೋಂದಣಿ ಕಛೇರಿಯಲ್ಲಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ.

**ಷೆಡ್ಯೂಲ್** : 1) ವಿಜಯನಗರ ಜಿಲ್ಲಾ, ಹರಪನಹಳ್ಳಿ ತಾಲ್ಲೂಕು, ಅರಸೀಕೆರೆ ಹೋಬಳಿ ಸತ್ತೂರು ಕಂದಾಯ ಗ್ರಾಮಕ್ಕೆ ಸೇರಿದ ಹರಪನಹಳ್ಳಿ ಉಪ ನೋಂದಣಿ ಕಛೇರಿ ಆಡಳಿತ ವ್ಯಾಪ್ತಿಗೆ ಒಳಪಟ್ಟ ಸರ್ವೆ ನಂ. 79/ಎಫ್2 ವಿಸ್ತೀರ್ಣ 00 ಎಕರೆ 50 ಸೇಂಟ್ಸ್ ಆಕಾರ 0-12 ವುಳ್ಳ ಪೂರಾ ಜಮೀನಿಗೆ ಚಕ್ಕುಬಂಧಿ : ಪೂರ್ವ: ಬಂಡಿದಾರ, ಪಶ್ಚಿಮ:ಸರ್ವೆ ನಂಬರ್ 80/ಡಿ2 ಈ ದಿನ ನೀವು ಕ್ರಯ ಹೊಂದಿದ ನಿಮ್ಮದೇ ಜಮೀನು, ಉತ್ತರ :ಎ. ಎನ್. ಕುಮಾರ್ ಇವರ ಜಮೀನು, ದಕ್ಷಿಣ : ಕೆ.ಎಂ. ಸಿದ್ದೇಶ್ವರಯ್ಯ ಹಾಗೂ ಆರ್. ಪ್ರಭು ಇವರ ಜಮೀನುಗಳು. 2) ವಿಜಯನಗರ ಜಿಲ್ಲಾ, ಹರಪನಹಳ್ಳಿ ತಾಲ್ಲೂಕು, ಅರಸೀಕೆರೆ ಹೋಬಳಿ ಸತ್ತೂರು ಕಂದಾಯ ಗ್ರಾಮಕ್ಕೆ ಸೇರಿದ ಹರಪನಹಳ್ಳಿ ಉಪ ನೋಂದಣಿ ಕಛೇರಿ ಆಡಳಿತ ವ್ಯಾಪ್ತಿಗೆ ಒಳಪಟ್ಟ ಸರ್ವೆ ನಂ. 80/ಡಿ2 ವಿಸ್ತೀರ್ಣ 01 ಎಕರೆ 70 ಸೇಂಟ್ಸ್ ಆಕಾರ 0-39 ವುಳ್ಳ. ಪೂರಾ ಜಮೀನಿಗೆ ಚಕ್ಕುಬಂಧಿ:ಪೂರ್ವ: ಸರ್ವೇ ನಂಬರ್ 79/ಎಫ್2 ಈ ದಿನ ನೀವು ಕ್ರಯ ಹೊಂದಿದ ನಿಮ್ಮದೇ ಜಮೀನು. ಪಶ್ಚಿಮ: ನಿಚ್ಚವ್ವನಹಳ್ಳಿ ಲತಮ್ಮ ಇವರ ಜಮೀನು, ಉತ್ತರ : ಎ.ಎನ್. ಗುರುಲಿಂಗಪ್ಪ ಇವರ ಜಮೀನು, ದಕ್ಷಿಣ : ಶಿವಪ್ಪ ಹಳ್ಳಳ್ಳಿ ಆದ ನಿಮ್ಮದೇ ಬೇರೆ ಜಮೀನು ಈ ಚಕ್ಕುಬಂದಿ ಮಧ್ಯದಲ್ಲಿರುವ ಒಟ್ಟು ಎರಡು ಸರ್ವೆ ನಂಬರ್‌ಗಳ ಒಟ್ಟು ವಿಸ್ತೀರ್ಣ 2.20 ಎರಡು ಎಕರೆ ಇಪ್ಪತ್ತು ಸೆಂಟ್ಸ್ ಜಮೀನು ಮಾತ್ರ.

ಸಂಪರ್ಕಿಸಬೇಕಾದ ವಿಳಾಸ :
**ಎಂ. ನಾಗೇಂದ್ರಪ್ಪ**, ವಕೀಲರು, ಜಾನಿಬಾಷ ಕಾಂಪ್ಲೆಕ್ಸ್,
ಐ.ಬಿ. ಕಛೇರಿ ಹತ್ತಿರ, ಹೊಸಪೇಟೆ ರಸ್ತೆ, ಹರಪನಹಳ್ಳಿ ಟೌನ್
ವಿಜಯನಗರ ಜಿಲ್ಲೆ. **ಮೊ.:98457 26838**
mail.mangendradvg@gmail.com

### ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಕೆ.ಕರೇ ಹನಮಪ್ಪ ಬಿನ್ ಕಾಡಪ್ಪ # 1776/ಎ-94 ಎನ್‌ಸಿಸಿ ಆಫೀಸ್ ಎದುರು, ಎಸ್.ಎಸ್. ಬಡಾವಣೆ, ದಾವಣಗೆರೆ ಸಿಟಿ ಇವರುಗಳು ಕೊಟ್ಟ ಅಧಿಕಾರ ಮತ್ತು ಮಾಹಿತಿ ಮೇರೆಗೆ ಈ ಮೂಲಕ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ,

ನಮ್ಮ ಕಕ್ಷಿದಾರರು ಈ ನೋಟಿಸ್ ಅನುಸೂಚಿ ಆಸ್ತಿಯ ಮಾಲಿಕರಾಗಿರುತ್ತಾರೆ. ಸದರಿ ಆಸ್ತಿಯನ್ನು ಕೈಗಡ ಸಾಲದ ಸಲುವಾಗಿ ಅಂತ ನಂಬಿಗೆಯಿಂದ ದಿ. 19.1.2019ರಂದು ಮತ್ತು ದಿನಾಂಕ : 20.10.2020ರಂದು ದಾವಣಗೆರೆ ತಾಲ್ಲೂಕು ಶಾಮನೂರು ಗ್ರಾಮದ ಕಣ್ಣಾಳು ಆಂಜೆನಪ್ಪ ಬಿನ್ ಬಸವರಾಜಪ್ಪ ಇವರಿಗೆ ಕ್ರಯದ ಕರಾರು ಪತ್ರವನ್ನು ಬರೆದು ಕೊಟ್ಟಿರುತ್ತಾರೆ. ಸದರಿ ಕ್ರಯದ ಕರಾರು ಪತ್ರದಲ್ಲಿ ನಮೂದಿಸಿರುವಂತೆ, ಸದರಿ ಕಣ್ಣಾಳು ಆಂಜೆನಪ್ಪನವರಿಂದ ಹಣವನ್ನು ಪಡೆದು ಕೊಂಡಿರುವುದಿಲ್ಲ. ಸದರಿ ಎರಡು ಕ್ರಯದ ಕರಾರು ಪತ್ರವನ್ನು ಕಾನೂನು ಪ್ರಕಾರ ರದ್ದು ಪಡಿಸುವುದು ತುಂಬಾ ಅವಶ್ಯವಿರುತ್ತದೆ.

ಆದ್ದರಿಂದ ಸದರಿ ಕ್ರಯದ ಕರಾರು ಪತ್ರಗಳಲ್ಲಿ ಈ ಹಿಂದೆ 11 ತಿಂಗಳ ಅವಧಿಯನ್ನು ನಮೂದಿಸಿ, ನಂಬಿಕೆ ಕ್ರಯದ ಕರಾರು ಪತ್ರಗಳನ್ನು ಸೃಷ್ಟಿಸಿರುತ್ತಾರೆ. ಸದರಿ ಕಣ್ಣಾಳು ಆಂಜೆನಪ್ಪ ಇವರಿಂದ ನಮ್ಮ ಕಕ್ಷಿದಾರರಿಗೆ 15 ಲಕ್ಷಗಳು ಮಾತ್ರ ಸಂದಾಯವಾಗಿದೆ. ಆದರ ಪೈಕಿ 4,63,500 ರೂಪಾಯಿಗಳು ಫೋನ್-ಪೇ ಮತ್ತು ಮೊಬೈಲ್ ಮುಖಾಂತರ ಮರು ಪಾವತಿಸಿರುತ್ತಾರೆ. ಬಾಕಿ 10,36,500/-ರೂ. ಗಳನ್ನು ಮಾತ್ರ ಕೊಡುವದಿರುತ್ತದೆ. ಸದರಿ ವ್ಯವಹಾರವನ್ನು ಕೈಗಡ ಸಾಲದ ಹಣ ಅಂತ ಸಾಲವನ್ನು ಪದದಿರುತ್ತಾರೆ. ಸದರಿ ಪತ್ರಗಳು ಈಗಾಗಲೇ ಅವಧಿ ಮೀರಿದ ಪತ್ರಗಳಾಗಿರುತ್ತವೆ. ಸದರಿ ಪತ್ರಗಳ ರದ್ದತಿಗಾಗಿ ಈ ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ತುಂಬಾ ಅವ್ಯಶಕ ಇರುವುದರಿಂದ ಮತ್ತು ನಮ್ಮ ಕಕ್ಷಿದಾರರು ಈ ಪತ್ರಿಕ ಪ್ರಕಟಣೆಯ ನಂತರ ಕಾನೂನು ಪ್ರಕಾರ ಸದರಿ ನೊಂದಾಯಿತ ದಿನಾಂಕ : 19.1.2019 ಮತ್ತು ದಿನಾಂಕ : 20.10.2020ರ ಕ್ರಯದ ಕರಾರು ಪತ್ರಗಳನ್ನು ರದ್ದು ಪಡಿಸಲು ಸೂಕ್ತ ನ್ಯಾಯಾಲಯದಲ್ಲಿ ದಾವೆಗಳನ್ನು ಸಲ್ಲಿಸುವವರು ಇರುತ್ತಾರೆ. ಆದ್ದರಿಂದ ಈ ಅನುಸೂಚಿ ಆಸ್ತಿಗೆ ಸಂಬಂಧಪಟ್ಟಂತೆ ಬೇರೆ ಯಾರು ವ್ಯವಹಾರ, ಪರಭಾರೆ ವಗೈರೆ ಮಾಡಬಾರದಾಗಿ ನೀಡಿದ ಸಾರ್ವಜನಿಕ ಪ್ರಕಟಣೆ.

**ಷೆಡ್ಯೂಲ್**

ದಾವಣಗೆರೆ ಮಹಾಣಗರ ಪಾಲಿಕೆ, #1776/ಎ-94, ಅಳತೆ 30x50 ಅಡಿವುಳ್ಳ ಪೂರಾ ಮನೆ ಮತ್ತು ಖಾಲಿ ಜಾಗ ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ ಸೈಟ್ ನಂ.93 ಪಶ್ಚಿಮಕ್ಕೆ ಸೈಟ್ ನಂ. 95 ಉತ್ತರಕ್ಕೆ : ಸೈಟ್ ನಂ.79ರಲ್ಲಿ ಬಿಲ್ಡಿಂಗ್, ದಕ್ಷಿಣಕ್ಕೆ : 30 ಫೀಟ್ ರೋಡ್.

ಇಶ್ರತ್‌ಬಾನು
ವೀಣಾ ಎಸ್.ಎನ್,
ವಕೀಲರು
ಮೊ : 63631 75269, 81838 47137

ಸ್ಥಳ : ದಾವಣಗೆರೆ
ದಿನಾಂಕ : 3.9.2022

### ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,

ಆಡಳಿತ ಕಛೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ–577 001

**ಪ್ರಕಟಣೆ**

ಬಾಪೂಜಿ ಕೋ – ಆಪರೇಟಿವ್ ಬ್ಯಾಂಕ್ ಲಿ . , ದಾವಣಗೆರೆ ಇದರ 2021 – 2022 ನೇ ಸಾಲಿನ 53 ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 11 ಸೆಪ್ಟೆಂಬರ್ 2022 ನೇ ಭಾನುವಾರ ಮಧ್ಯಾಹ್ನ 12.30 ಘಂಟೆಗೆ ಶಾಮನೂರು ರಸ್ತೆಯಲ್ಲಿರುವ " ಬಾಪೂಜಿ ಬ್ಯಾಂಕ್ ಸಮುದಾಯ ಭವನ " ದಲ್ಲಿ ಕರೆಯಲಾಗಿದೆ .

ಬ್ಯಾಂಕಿನ ಮಾನ್ಯ ಸದಸ್ಯರು ಸಮಯಕ್ಕೆ ಸರಿಯಾಗಿ ಸಭೆಗೆ ಆಗಮಿಸಲು ಕೋರಿದೆ .

ಮಾನ್ಯ ಸದಸ್ಯರುಗಳಿಗೆ ಈಗಾಗಲೇ ವಾರ್ಷಿಕ ವರದಿ ಪುಸ್ತಕಗಳನ್ನು ಅಂಚೆ ಮೂಲಕ ಕಳುಹಿಸಲಾಗಿದೆ . ಆದರೆ ಅನೇಕ ವರದಿ ಪುಸ್ತಕಗಳು ವಿಳಾಸ ಸರಿ ಇಲ್ಲದೇ ಹಿಂತಿರುಗಿ ಬಂದಿರುತ್ತವೆ. ತಲುಪದೇ ಇರುವವರು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಬಂದು ತಮ್ಮ ಈಗಿನ ವಿಳಾಸವನ್ನು ನೀಡಿ ಪಡೆಯಬಹುದು.

**ಜಿ.ವಿ. ಶಿವಶಂಕರ್** ಪ್ರಧಾನ ವ್ಯವಸ್ಥಾಪಕರು

**ಡಾ. ಶಾಮನೂರು ಶಿವಶಂಕರಪ್ಪ,** ಅಧ್ಯಕ್ಷರು

### ದಾವಣಗೆರೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ.

**4ನೇ ವಾರ್ಷಿಕ ಮಹಾಸಭೆಯ ನೋಟಿಸ್**

ದಾವಣಗೆರೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿಯ 4ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 24.09.2022ನೇ ಶನಿವಾರದಂದು ಬೆಳಿಗ್ಗೆ 11.30 ಘಂಟೆಗೆ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸಮಾಜ, ವಿದ್ಯಾರ್ಥಿನಿಲಯದ ಸಭಾಂಗಣ, ಜೆ.ಹೆಚ್. ಪಟೇಲ್ ಬಡಾವಣೆ, ದಾವಣಗೆರೆ ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಕರ್ ಪಾಟೀಲ್ ಬಿ.ಜಿ. ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸಹಕಾರಿಯ ಸದಸ್ಯರು ಸಭೆಯಲ್ಲಿ ಭಾಗವಹಿಸಿ, ವಾರ್ಷಿಕ ಮಹಾಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಸಭೆಯ ನೋಟಿಸನ್ನು ಅಜೆಂಡಾ ಮತ್ತು ವಿವರವಾದ ಟಿಪ್ಪಣಿಗಳೊಂದಿಗೆ ಎಲ್ಲಾ ಅರ್ಹ ಸದಸ್ಯರಿಗೆ ಸಾಮಾನ್ಯ ಅಂಚೆ ಮೂಲಕ ಕಳುಹಿಸಲಾಗಿದೆ.

ನೋಟೀಸು ತಲುಪದ ಅರ್ಹ ಸದಸ್ಯರು ಈ ಪ್ರಕಟಣೆಯನ್ನೇ ವಾರ್ಷಿಕ ಮಹಾ ಸಭೆಯ ನೋಟಿಸು ಎಂದು ಪರಿಗಣಿಸಿ, ಸಭೆಯಲ್ಲಿ ಹಾಜರಿರಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ 87927 09401ಗೆ ಸಂಪರ್ಕಿಸಿ.

| ಶಂಕರ್ ಪಾಟೀಲ್ ಬಿ.ಜಿ. | ಜಿ. ಚಿದಾನಂದ್ | ರಜತ್ ವಿ. |
|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ಮುಖ್ಯ ಕಾರ್ಯನಿರ್ವಾಹಕ |

# ವಾರ ಭವಿಷ್ಯ

**ದಿನಾಂಕ : 04.10.2021 ರಿಂದ 10.10.2022**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಉದ್ಯಮದಲ್ಲಿ ಸಾಕಷ್ಟು ಅಡ್ಡಿ ಆತಂಕಗಳು, ಎದುರಾಗಲಿದ್ದು, ನಿಮ್ಮನ್ನು ಧೃತಿಗೆಡಸಲಿದೆ.ಹಾಗೆಂದ ಮಾತ್ರಕ್ಕೆ ಕಾರ್ಯಗಳು ನಿರಾಂತಕವಾಗಿ ಮುಂದುವರೆದು ಕೊಂಡು ಹೋಗಲಿದೆ. ಬಂಧುಗಳೊಂದಿಗೆ ವೈಮನಸ್ಯದಿಂದ ಕಾದಾಡಿದ ನಿಮಗೆ ಈಗ ಅವರು ಸುಮ್ಮನಿದ್ದರೂ, ಮುಂದೆ ಅವರಿಂದಲೇ ಅವಮಾನವಾದಿತು. ಹಣಕಾಸಿನ ಪರಿಸ್ಥಿತಿ ಸಾಧರಣವಾಗಿರುವುದರಿಂದ, ಹೆಚ್ಚಿನ ಹೊಂದಾಣಿಕೆಗೆ ಹೋಗಬೇಡಿ. ಖರ್ಚುವೆಚ್ಚಗಳ ಮೇಲೆ ಹಿಡಿತವಿರಲಿ. ಹೊಗಳಿಕೆಯ ಮಾತಿಗೆ ಮರುಳಾಗುವುದು ಬೇಡ.ಆರೋಗ್ಯದ ಕಡೆ ಲಕ್ಷ್ಯವಿರಲಿ. ಭಾನು, ಸೋಮ, ಮಂಗಳ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಮನೆಯಲ್ಲಿ ನಡೆಯಲಿರುವ ಶುಭಕಾರ್ಯಗಳಿಗೆ ನಿಮ್ಮದೇ ಮುಂದಾಳತ್ವ. ಆಸ್ತಿಗೆ ಸಂಬಂಧಿಸಿದಂತೆ ಸೋದರನು ಮೊದಮೊದಲು ಪ್ರತಿರೋಧ ವ್ಯಕ್ತಪಡಿಸಿದರೂ, ನಂತರ ಸರಿದಾರಿಗೆ ಬರುವನು.ಕೈಗಾರಿಕೋದ್ಯಮಿಗಳು, ಕಾರ್ಮಿಕ ರೊಂದಿಗೆ ವಾದವಿವಾದ ಮಾಡುವುದಕ್ಕಿಂತ ಸಮಾಧಾನಕರ ಮಾತುಗಳು ಹೆಚ್ಚು ಫಲಪ್ರದವಾಗಲಿದೆ. ರಾಜಕಾರಣಿಗಳಿಗೆ ಅವರದೇ ಪಕ್ಷದ ಅಭ್ಯರ್ಥಿಗಳಿಂದ ಪ್ರಬಲಸ್ಪರ್ಧೆಯನ್ನು ಎದುರಿಸಬೇಕಾಗಬಹುದು. ಹಣಕಾಸಿನ ವಿಚಾರದಲ್ಲಿ ಲೆಕ್ಕಪತ್ರ ಪರಿಶೋಧಕರಿಂದ ಸೂಕ್ತ ಸಲಹೆ ಪಡೆಯಿರಿ. ಅಪರೂಪಕ್ಕೆ ಸೋದರಿಯ ಭೇಟಿಯಾಗಲಿದೆ. ಬುಧ, ಶುಕ್ರ, ಶನಿ ಶುಭದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಸರ್ಕಾರಿ ನೌಕರರು ತಮ್ಮ ಮೇಲಾಧಿಕಾರಿಗಳೊಂದಿಗೆ, ವಾಗ್ವಾದ ಮಾಡುವುದಕ್ಕಿಂತ ತಾಳ್ಮೆಯಿಂದ ವಿಷಯದ ಮನವರಿಕೆ ಮಾಡಿಕೊಡುವುದು ಮೇಲು. ಹಣಕಾಸಿನ ನಿರ್ವಹಣೆ ಅಚ್ಚುಕಟ್ಟಾಗಿರದಿದ್ದಲ್ಲಿ ಲೆಕ್ಕಾಚಾರವು ತಲೆಕೆಳಗಾಗಬಹುದು. ಬಂಧುಗಳು,ನಿಮ್ಮ ಕೆಲಸ ಕಾರ್ಯಗಳನ್ನು ಪ್ರತಿರೋಧಿಸಬಹುದು. ಅದನ್ನು ಮನವರಿಕೆ ಮಾಡಿಕೊಡುವ ಜವಾಬ್ದಾರಿ ನಿಮ್ಮದಾಗಲಿದೆ. ಕೌಟುಂಬಿಕ ವಿಚಾರದಲ್ಲಿ ಹಿರಿಯರ ಅಣತಿಯಂತೆ ನಡೆದುಕೊಳ್ಳುವುದರಲ್ಲೇ ನಿಮ್ಮ ಹಿತವಡಗಿದೆ. ಬ್ಯಾಂಕ್ ನೌಕರರಿಗೆ ಹೆಚ್ಚಿದ ಜವಾಬ್ದಾರಿಯಿಂದಾಗಿ ಒತ್ತಡಕ್ಕೆ ಒಳಗಾಗುವರು.ಸೋಮ, ಮಂಗಳ, ಬುಧ ಶುಭದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಅನೇಕ ಅಗತ್ಯಗಳನ್ನು ಪೂರೈಸಲೇಬೇಕಾದ ಒತ್ತಡಕ್ಕೆ ಈ ವಾರ ಒಳಗಾಗುವಿರಿ. ಅದೃಷ್ಟವೆಂಬಂತೆ ಅದಕ್ಕೆ ಬೇಕಾದ ಹಣಾಕಾಸು ಸಕಾಲಕ್ಕೆ ತಾನಾಗಿಯೇ ಒದಗಲಿದೆ. ಫಲಾನುಭವಿಗಳಿಗೆ ಸರ್ಕಾರದಿಂದ ಬರಬೇಕಾಗಿರುವ ಸಕಲ ಸವಲತ್ತುಗಳು ಇಷ್ಟರಲ್ಲೇ ಸಿಗಲಿದೆ. ಆಸ್ತಿ ಖರೀದಿ ವಿಚಾರವನ್ನು ತಾತ್ಕಾಲಿಕವಾಗಿ ಮುಂದೂಡುವುದು ಮೇಲು. ಚಿನಿವಾರಪೇಟೆಯಲ್ಲಿ ಹೆಚ್ಚಿನ ವಹಿವಾಟು ನಡೆಯಲಿದ್ದು, ಲಾಭಾಧಿಕ್ಯವಾಗಲಿದೆ. ನಿಂತುಹೋಗಿದ್ದ ಕುಲದೇವತಾ ಕಾರ್ಯವನ್ನು ಮತ್ತೆ ಮುಂದುವರೆಸುವುದು ಸೂಕ್ತ. ಚಿಕ್ಕಮಕ್ಕಳನ್ನು ಹರಿತವಾದ ಆಯುಧಗಳಿಂದ ದೂರವಿಡಿ. ಗುರುಚರಿತ್ರೆಪಠಿಸಿ. ಭಾನು, ಸೋಮ, ಗುರು ಶುಭದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ರಾಜಕಾರಣಿಗಳು ತಮ್ಮ ಸುತ್ತಮುತ್ತ ನಡೆಯುತ್ತಿರುವ ವಿದ್ಯಮಾನಗಳ ಅರಿವಿಟ್ಟುಕೊಂಡು ಮಾತನಾಡುವುದು ಮೇಲು. ಆರೋಗ್ಯನಿ ಮಿತ್ತ ಹಲವಾರು ತಪಾಸಣೆ ಒಳಗಾಗಿದ್ದ ನಿಮಗೆ ನೆಮ್ಮದಿಯಿಂದ ನಿಟ್ಟುಸಿರುಬಿ ಡುವ ಸಮಾಚಾರ ಕೇಳಿ ಬರಲಿದೆ.ಉನ್ನತಾಧಿಕಾರಿಗಳಿಗೆ ಮಂತ್ರಿಮಹೋದಯರ ಚಿತಾವಣೆಯಿಂದಾಗಿ ಸ್ಥಾನಬದಲಾವಣೆ ಅಥವಾ ತಮ್ಮ ಸ್ಥಾನದ ಉಳಿವಿಗಾಗಿ ಹೋರಾಡಬೇಕಾದೀತು. ಕೂಲಿಕಾರ್ಮಿಕರಿಗೆ ಆದಾಯದಲ್ಲಿ ಹೆಚ್ಚಳವಾಗಲಿದೆ. ದೇವಸ್ಥಾನ ಮೊದಲಾದ ಧಾರ್ಮಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವವರ ಆದಾಯ ಹೆಚ್ಚಲಿದೆ. ರೇಷ್ಮೆನೇಕಾರರಿಗೆ ಬೇಡಿಕೆ ಹೆಚ್ಚಲಿದೆ. ಭಾನು, ಬುಧ, ಗುರು ಶುಭದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಯುವಕರು ತಾವಾಡಲಿರುವ ಮಾತುಕತೆಗಳಲ್ಲಿ ವ್ಯಾವಹಾರಿಕತೆ ಎದ್ದುಕಾಣಲಿದೆ. ಇದರಿಂದ ಮನೆಯಲ್ಲಿ ಹಿರಿಯರಿಗೆ ಕಿರಿಕಿರಿಯುಂಟಾಗಲಿದೆ. ಮಗನ ಮದುವೆಯ ವಿಷಯ ಅಥವಾ ಪ್ರಸ್ತಾಪ ಮತ್ತೆ ಮುಂದೆ ಹೋಗಲಿದೆ. ಆರ್ಥಿಕ ಹರಿವು ಮಂದಗತಿಯಲ್ಲಿ ಸಾಗಲಿದೆ. ಹಾಗೆಂದ ಮಾತ್ರಕ್ಕೆ ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ಮಗನ ಉದ್ಯೋಗದಲ್ಲಿ ಬದಲಾವಣೆಯಾಗಲಿದ್ದು; ವೇತನದ ಹೆಚ್ಚಳದೊಂದಿಗೆ ಕಂಪನಿಯಿಂದ ಸೌಲಭ್ಯಗಳು ಸಿಗಲಿದೆ. ವಿಷಜಂತುಗಳಿಂದ ಅಪಾಯವಾಗುವ ಸಂಭವವಿದ್ದು ಜಾಗರೂಕರಾಗಿರುವುದು ಮೇಲು. ವಿಷ್ಣುಸಹಸ್ರನಾಮ ಪಠಿಸಿ. ಬುಧ, ಗುರು, ಶುಕ್ರ ಶುಭದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಉದ್ಯೋಗ ಕ್ಷೇತ್ರದಲ್ಲಿ ನೀವು ಪ್ರಗತಿಸಾಧಿಸಿದಷ್ಟೂ ಶತ್ರುಗಳು ಹೆಚ್ಚಾಗುವರು. ಆದ್ದರಿಂದ ಎಚ್ಚರಿಕೆಯ ಹೆಜ್ಜೆಗಳನ್ನಿಡಿ. ಆಸ್ತಿಗೆ ಸಂಬಂಧಿದ ನ್ಯಾಯಾಲಯದ ವ್ಯಾಜ್ಯಗಳಲ್ಲಿ ನಿಮಗೆ ಹಿನ್ನಡೆಯಾಗಲಿದೆ. ಆದರೆ ಇದು ತಾತ್ಕಾಲಿಕ ಎಂಬುದು ನೆನಪಿರಲಿ. ಹೋಟೆಲ್ ಮೊದಲಾದ ಆಹಾರೋದ್ಯಮಿಗಳಿಗೆ ಸಂಪಾದನೆಯಾಗಲಿದೆ. ಜವಾಬ್ದಾರಿಗಳನ್ನು ವಹಿಸಿಕೊಳ್ಳುವ ಮೊದಲು ನಿಮ್ಮ ಸಾಮರ್ಥ್ಯದ ಅರಿವು ನಿಮಗಿರುವುದು ಲೇಸು.ವಿ ದ್ಯಾರ್ಥಿಗಳು ವಿದ್ಯಾಭ್ಯಾಸದ ವಿಚಾರದಲ್ಲಿ ಶಿಸ್ತಿನಿಂದ ವರ್ತಿಸಿದಲ್ಲಿ ಮಾತ್ರ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ. ಗುರುಗಳನ್ನು ಆರಾಧಿಸಿ. ಗುರು, ಶುಕ್ರ, ಶನಿ ಶುಭದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಅನಿರೀಕ್ಷಿತವಾದ ಸನ್ನಿವೇಶದಿಂದಾಗಿ ಮಗನ ಉದ್ಯೋಗದಲ್ಲಿ ಬದಲಾವಣೆಯಾಗುವ ಸಂಭವವಿದೆ. ವ್ಯಾಪಾರದಲ್ಲಿ ಎದುರಾಳಿಗಳನ್ನು ಮಟ್ಟಹಾಕಲು ಅವರದೇ ತಂತ್ರವನ್ನು ಬಳಸುವುದು ಉತ್ತಮ. ಶಾಸ್ತ್ರವಿದ್ವಾಂಸರಿಗೆ ಮಠಮಾನ್ಯಗಳಿಂದ ಸನ್ಮಾನದೊಂದಿಗೆ ಸಂಭಾವನೆಯೂ ದೊರೆಯಲಿದೆ.ಇಷ್ಟವಾಗಿದ್ದ ಮತ್ತು ಕಳೆದುಹೋಗಿದ್ದ ಅಮೂಲ್ಯ ವಸ್ತುವೊಂದು ಇಷ್ಟರಲ್ಲೇ ಮರಳಿಸಿಗಲಿದೆ. ಮನೆಯಲ್ಲಿ ಮಹಿಳೆಯರು ಆಡಲಿರುವ ಮಾತಿನಿಂದಾಗಿ ಕುಟುಂಬದ ಸದಸ್ಯರ ನಡುವೆ ವೈಮನಸ್ಯವುಂಟಾಗಲಿದೆ.ಹಿರಿಯರ ಅಣತೆಯಂತೆ ನಡೆದುಕೊಳ್ಳಿ, ಅಲ್ಲೇ ನಿಮ್ಮ ಹಿತವಡಗಿದೆ. ಸೋಮ, ಮಂಗಳ, ಗುರು ಶುಭದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಕುಟುಂಬದ ಹಿರಿಯರೊಂದಿಗೆ ನಡೆದ ವಾಗ್ವಾದಿಂದಾಗಿ ನಿಂತ ಕಾಲಲ್ಲೇ ಬೇರೆಮನೆ ಮಾಡುವ ಪ್ರಸಂಗ ಬರಬಹುದು. ಸಿನಿಮಾ ರಂಗದ ಸಾಹಸಿ ಕಲಾವಿದರಿಗೆ ಬೇಡಿಕೆ ಹೆಚ್ಚಲಿದೆ. ಹಣಕಾಸು ಸಂಸ್ಥೆಗಳಲ್ಲಿ ಕೆಲಸ ಮಾಡುವ ಹಿರಿಯಾಧಿಕಾರಿಗಳಿಗೆ ಮೊಕ್ಕದ್ದಮೆಯೊಂದಕ್ಕೆ ಸಂಬಂಧಿಸಿದಂತೆ ವರ್ಗಾವರ್ಗಿಯಾಗಲಿದೆ. ಖಾಸಗಿ ಕಂಪನಿ ನೌಕರರು ಕರ್ತವ್ಯ ನಿಮಿತ್ತ ವಾಸಸ್ಥಳದಿಂದ ಕೆಲಕಾಲ ದೂರದೂರಿನಲ್ಲಿ ವಾಸಮಾಡಬೇಕಾಗಬಹುದು. ಉನ್ನತಾಧ್ಯಯನ ಮಾಡುವವರಿಗೆ ಅವರ ಸಂಶೋಧನಾ ಕಾರ್ಯದಲ್ಲಿ ಹತ್ತುಹಲವು ಸಮಸ್ಯೆಗಳು ಬರಲಿವೆ. ಭಾನು, ಬುಧ, ಗುರು ಶುಭದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಮಾಡುತ್ತಿರುವ ಕೆಲಸದಲ್ಲಿ ತೃಪ್ತಿ ಇಲ್ಲದೇ ಹೋಗಬಹುದು. ಮನೆ ಬದಲಾಯಿಸಬೇಕೆಂಬ ವಿಷಯಕ್ಕೆ ಈ ವಾರ ಚಾಲನೆದೊರೆಯಲಿದೆ. ವೈಯುಕ್ತಿಕ ಕೆಲಸಗಳನ್ನು ಗಮನವಿಟ್ಟು ಮಾಡಿ. ಗಳಿಕೆಯಲ್ಲಿ ಹೆಚ್ಚಳ ಕಂಡುಬರಲಿದ್ದು, ಅದರಿಂದ ನಿಮ್ಮ ಅನೇಕ ಹಣಕಾಸಿನ ಸಮಸ್ಯೆಗಳು ಬಗೆಹರಿಯಲಿವೆ. ಪಡೆಯಲು ಬಯಸಿದ ಪ್ರತಿಯೊಂದೂ ಕೂಡ ಕಷ್ಟಪಟ್ಟಲ್ಲಿ ಮಾತ್ರ ಸಿಗಲಿದೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡವರಿಗೆ ಸಾರ್ವಜನಿಕ ಬೆಂಬಲದೊರೆಯಲಿದೆ. ಬೇರೆಯವರ ಕಷ್ಟಗಳಿಗೆ ಸ್ಪಂದಿಸುವ ನಿಮ್ಮ ಸ್ವಭಾವ ಎಲ್ಲರಿಗೂ ಇಷ್ಟವಾಗಲಿದೆ. ಭಾನು, ಬುಧ, ಶನಿ ಶುಭದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಲೇವಾದೇವಿ ವ್ಯವಹಾರ ಮಾಡುವವರಿಗೆ ನಿರೀಕ್ಷೆಗೂ ಮೀರಿದ ಆದಾಯವಿದೆ. ಆದರೂ ವ್ಯಕ್ತಿಗಳನ್ನು ನೋಡಿ ವ್ಯವಹರಿಸುವುದು ಮೇಲು. ನಿಮ್ಮ ಪೂರ್ವಿಕರು ಮಾಡಿರುವ ಉತ್ತಮ ಸಾಮಾಜಿಕ ಕೆಲಸಗಳಿಂದಾಗಿ ಸಮಾಜದಲ್ಲಿ ನಿಮ್ಮ ಗೌರವ ಹೆಚ್ಚಲಿದೆ. ಸಾಧು-ಸಂತರ ಸತ್ಕಾರ್ಯಗಳಿಗೆ ಸಾಧ್ಯವಾದಷ್ಟು ನೆರವು ನೀಡಿ. ಆರೋಗ್ಯ ಇಲಾಖೆಯಲ್ಲಿ ಕರ್ತವ್ಯನಿ ರ್ವಹಿಸುವವರಿಗೆ ವೇತನದಲ್ಲಿ ಹೆಚ್ಚಳವಾಗಲಿದೆ. ಮಕ್ಕಳ ವಿದ್ಯಾಭ್ಯಾಸವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಮಡದಿಯ ಆರೋಗ್ಯದ ಕಡೆ ಗಮನವಿರಲಿ. ಭಾನು, ಗುರು, ಶನಿ ಶುಭದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಪದವೀಧರರಿಗೆ ಉದ್ಯೋಗ ಕ್ಷೇತ್ರದಲ್ಲಿ ಭಾರಿ ಸ್ಪರ್ಧೆ ಎದುರಿಸ ಬೇಕಾದಿತು. ಆಯವ್ಯಯಗಳು ಸಮನಾಗಿರುವುದರಿಂದ ಉಳಿತಾಯದ ಚಿಂತೆಬೇಡ. ನಿವೃತ್ತಿಯಂಚಿನಲ್ಲಿರುವವರು ತಮ್ಮಮುಂದಿನ ಜೀವನದ ಬಗ್ಗೆ ಈಗಲೇ ಒಂದು ರೂಪರೇಷೆಯನ್ನು ಸಿದ್ಧಪಡಿಸಿಕೊಳ್ಳುವುದು ಮೇಲು.ಅಪರಿಚಿತರಿಂದ ಮೋಸ ಹೋಗುವುದನ್ನು ಸಾಧ್ಯವಾದಷ್ಟು ತಪ್ಪಿಸಿಕೊಳ್ಳಿ. ಹೈನುಗಾರಿಕೆ ನಡೆಸುತ್ತಿರುವವರಿಗೆ ಸಮತೋಲನದ ಆದಾಯವನ್ನು ಪಡೆಯುವರು. ಮೋಜುಮಸ್ತಿಗಾಗಿ ಹಣವ್ಯಯವಾಗಲಿದೆ. ಹಿರಿಯರ ಕೋರಿಕೆ ಪೂರೈಸಲು ಶಕ್ತಿಮೀರಿ ಪ್ರಯತ್ನಿಸಿ. ಸೋಮ, ಗುರು, ಶುಕ್ರ ಶುಭದಿನಗಳು.

**ವಿಶೇಷ ದಿನಗಳು :** ದಿ. 4.09.2022ನೇ ಭಾನುವಾರ ಜೇಷ್ಠಾದೇವಿ ಪೂಜೆ, ಜಗನ್ನಾಥ ದಾಸರ ಆರಾಧನೆ (ಮಾನ್ವಿ)
ದಿ. 05.09.2022 ನೇ ಸೋಮವಾರ ಜೇಷ್ಠಾದೇವಿ ವಿಸರ್ಜನೆ ದೋರಬಂಧನ.
ದಿ. 9.9.2022ನೇ ಶುಕ್ರವಾರ ಅನಂತ ಚತುರ್ದಶಿ.

# ಓದಿನ ಜೊತೆ ಉತ್ತಮ ಸಂಸ್ಕಾರ ರೂಢಿಸಿಕೊಳ್ಳಿ : ಸಂಸದ ಸಿದ್ದೇಶ್ವರ

ದಾವಣಗೆರೆ, ಸೆ.3- ಯುವಕರು ಓದುವುದರ ಜೊತೆಗೆ ಕ್ರೀಡೆ, ಸಂಸ್ಕೃತಿ ಹಾಗೂ ಉತ್ತಮ ಸಂಸ್ಕಾರವನ್ನು ಬೆಳೆಸಿಕೊಂಡರೆ ಜೀವನದಲ್ಲಿ ಯಶಸ್ಸು ಕಾಣಬಹುದು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಪ್ರತಿಪಾದಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತಾಶ್ರಯಲ್ಲಿ ಆಯೋಜಿಸಲಾಗಿದ್ದ 'ದಾವಣಗೆರೆ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಗುಂಡು ಎಸೆಯುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಗೆ ಸಹಕಾರಿಯಾಗಲಿದೆ. ಯುವಕರು ಓದುವುದರ ಜೊತೆಗೆ ಕ್ರೀಡೆ ಹಾಗೂ ಉತ್ತಮ ಸಂಸ್ಕಾರವನ್ನು ಬೆಳೆಸುಕೊಂಡರೆ ಜೀವನದಲ್ಲಿ ಯಶಸ್ಸನ್ನು ಕಾಣಬಹುದು.

ಕ್ರೀಡಾಪಟುಗಳು ಸೋಲು ಗೆಲುವಿನ ಬಗ್ಗೆ ಯೋಚಿಸದೆ ಉತ್ತಮ ಸಾಧನೆ ಮಾಡಲು ಗಮನಹರಿಸಬೇಕು ಎಂದರು.



ಇತ್ತೀಚಿಗೆ ನಡೆದ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ನಮ್ಮ ದೇಶ ಭಾಗವಹಿಸಿ ಸುಮಾರು 61 ಪದಕಗಳನ್ನು ಪಡೆದು ಇತಿಹಾಸ ಸೃಷ್ಟಿಸಿದೆ.

ದೇಶದ ಕ್ರೀಡಾಪಟುಗಳು ರಾಜ್ಯ, ರಾಷ್ಟ್ರ, ಅಂತರಾಷ್ಟ್ರ ಮಟ್ಟಕ್ಕೆ ಹೋಗಿ ದೇಶದ ಹಿರಿಮೆಯನ್ನು ಹೆಚ್ಚಿಸುತ್ತಿದ್ದಾರೆ. ನೀವುಗಳು ಸಹ ದಸರಾ ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡುವ ಮೂಲಕ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಜಿಲ್ಲೆಯನ್ನು ಪ್ರತಿನಿಧಿಸಿ ಜಿಲ್ಲೆಗೆ ಕೀರ್ತಿ ತನ್ನಿ ಎಂದು ಶುಭ ಹಾರೈಸಿದರು.

ಶಾಸಕ ಹಾಗೂ ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ಅಧ್ಯಕ್ಷ ಪ್ರೊ. ಎನ್. ಲಿಂಗಣ್ಣ ಮಾತನಾಡಿ, ಕ್ರೀಡಾಪಟುಗಳು ಸೌಹಾರ್ದಯುತವಾಗಿ ಕ್ರೀಡಾ ಮನೋಭಾವದಿಂದ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ಎಂತಹ ಸವಾಲನ್ನು ಬೇಕಾದರೂ ಮನೋಧೈರ್ಯದಿಂದ ಎದುರಿಸಬಹುದು. ಆಟದಲ್ಲಿ ಸೋಲು ಗೆಲುವು ಎರಡನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು.

### ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ

ಮಹಾನಗರ ಪಾಲಿಕೆಯ ಮೇಯರ್ ಆರ್.ಜಯಮ್ಮ ಗೋಪಿನಾಯ್ಕ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಸುಚೇತಾ ಎಂ. ನೆಲವಿಗಿ ಸೇರಿದಂತೆ ಜಿಲ್ಲೆಯ ವಿವಿಧ ತಾಲ್ಲೂಕುಗಳ ಕ್ರೀಡಾಪಟುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ

### ನಗರದಲ್ಲಿ ನಾಳೆ ಪ್ರಶಸ್ತಿ ಪ್ರದಾನ ಮತ್ತು ನಿವೃತ್ತ ಶಿಕ್ಷಕರಿಗೆ ಸನ್ಮಾನ

ದಾವಣಗೆರೆ, ಸೆ.3- ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ವತಿಯಿಂದ ನೀಡಲಾಗುವ 2022-23ನೇ ಸಾಲಿನ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದಿಂದ ಆಯ್ಕೆಯಾದ ಶಿಕ್ಷಕರಿಗೆ ನಾಡಿದ್ದು ದಿನಾಂಕ 5 ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಇದೇ ಸಂದರ್ಭದಲ್ಲಿ ನಿವೃತ್ತ ನೌಕರರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಜಿ.ಆರ್.ತಿಪ್ಪೇಶಪ್ಪ ತಿಳಿಸಿದ್ದಾರೆ. ಪ್ರಶಸ್ತಿಗೆ ಆಯ್ಕೆಯಾದ ಶಿಕ್ಷಕರ ವಿವರ ಹೀಗಿದೆ :

**ಕಿರಿಯ ಪ್ರಾಥಮಿಕ ಶಾಲಾ ವಿಭಾಗ :** ಫಯಿಜ್ ಉರ್ ರೆಹಮಾನ್ ಸಹ ಶಿಕ್ಷಕರು ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಕರೆಬಿಳಚಿ, ಚನ್ನಗಿರಿ ತಾಲ್ಲೂಕು. ಅಶ್ವತ್ಥ್ ಕುಮಾರ್ ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ನೀಲಾನಹಳ್ಳಿ, ದಾವಣಗೆರೆ ಉತ್ತರ ವಲಯ. ನೇಮಾವತಿ ಸಿ.ಎಂ. ಸಹ ಶಿಕ್ಷಕರು ಕರ್ನಾಟಕ ಪ್ರಾಥಮಿಕ ಪಬ್ಲಿಕ್ ಶಾಲೆ ಕುಕ್ಕುವಾಡ, ದಾವಣಗೆರೆ ದಕ್ಷಿಣ ವಲಯ. ಕೆ.ಎನ್.ಸಾವಿತ್ರಮ್ಮ ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಂಡಜ್ಜಿ, ಹರಿಹರ ತಾಲ್ಲೂಕು. ಶಶಿಕಲಾ ಎಂ, ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ವ್ಯಾಸಗೊಂಡನಹಳ್ಳಿ, ಜಗಳೂರು ತಾಲ್ಲೂಕು. ಪ್ರಹ್ಲಾದ್ ಜಿ.ಹೆಚ್. ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹೊಟ್ಯಾಪುರ, ಹೊನ್ನಾಳಿ ತಾಲ್ಲೂಕು. ಸರ್ವಮಂಗಳ ಎಸ್ ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮಲ್ಲಿಗೇನಹಳ್ಳಿ, ಹೊನ್ನಾಳಿ/ನ್ಯಾಮತಿ ತಾಲ್ಲೂಕು.

**ಹಿರಿಯ ಪ್ರಾಥಮಿಕ ಶಾಲಾ ವಿಭಾಗ :** ಎ. ತನುಜಾ ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೆದಿಕೆರೆ, ಚನ್ನಗಿರಿ ತಾಲ್ಲೂಕು. ಪ್ರಕಾಶ ಮಡಿವಾಳ ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಲ್ಲಾಪುರ, ದಾವಣಗೆರೆ ಉತ್ತರ ವಲಯ. ಟಿ. ಪದ್ಮ ಸಹ ಶಿಕ್ಷಕರು ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ ಮಾಯಕೊಂಡ, ದಾವಣಗೆರೆ ದಕ್ಷಿಣ ವಲಯ. ಮಂಗಳ ಕೆ., ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಧೂಳೆಹೊಳೆ, ಹರಿಹರ ತಾಲ್ಲೂಕು. ಬಸವರಾಜ ಬಿ.ಎಸ್ ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಲೇಕಲ್ಲು, ಜಗಳೂರು ತಾಲ್ಲೂಕು. ಇಮ್ತಿಯಾಜ್ ಅಹಮದ್ ಖತೀಬ್ ಬ.ಮು.ಶಿ. ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಮಾವಿನಕೋಟೆ, ಹೊನ್ನಾಳಿ ತಾಲ್ಲೂಕು. ಜಯಲಕ್ಷ್ಮಿ ಜಿ.ಹೆಚ್., ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿನ್ನಿಕಟ್ಟೆ, ಹೊನ್ನಾಳಿ/ನ್ಯಾಮತಿ ತಾಲ್ಲೂಕು. ಮಹಾಂತೇಶ ಡಿ.ಆರ್., ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಜೆ.ಹೆಚ್.ಪಟೇಲ್ ನಗರ, ಬಸವಾಪಟ್ಟಣ, ಚನ್ನಗಿರಿ ತಾಲ್ಲೂಕು.

**ಪ್ರೌಢಶಾಲಾ ವಿಭಾಗ :** ಪುಂಡಲೀಕ ಎಂ.ಕೆ, ಚಿತ್ರಕಲಾ ಶಿಕ್ಷಕರು ಸರ್ಕಾರಿ ಪ್ರೌಢ ಶಾಲೆ ಬೆಳಲಗೆರೆ, ಚನ್ನಗಿರಿ ತಾಲ್ಲೂಕು. ವಾಗೀಶ್ ಮುಳ್ಳಿಒಡೆಯರ್ ಸಹ ಶಿಕ್ಷಕರು ಸರ್ಕಾರಿ ಪೌಢಶಾಲೆ ಆವರಗೊಳ್ಳ, ದಾವಣಗೆರೆ ಉತ್ತರ ವಲಯ. ಶಕುಂತಲ ಎಂ.ವಿ ಸಹ ಶಿಕ್ಷಕರು ಸರ್ಕಾರಿ ಪ್ರೌಢ ಶಾಲೆ ಕುರ್ಕಿ, ದಾವಣಗೆರೆ ದಕ್ಷಿಣ ವಲಯ. ಸುರೇಶ್ ಎಸ್. ಮೂಲಿಮನಿ ಸಹ ಶಿಕ್ಷಕರು ಸ.ಪ.ಪೂ. ಕಾಲೇಜು (ಪ್ರೌ.ಶಾ.ವಿ) ಮಲೇಬೆನ್ನೂರು, ಹರಿಹರ ತಾಲ್ಲೂಕು. ಮಂಜುನಾಥ ಎಂ.ವಿ. ಸಹ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ (ಆರ್.ಎಂ.ಎಸ್.ಎ) ಯರಲಕಟ್ಟೆ, ಜಗಳೂರು ತಾಲ್ಲೂಕು. ಅರುಣಕುಮಾರ್ ಆರ್.ಎಂ ಸಹ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಹೆಚ್.ಗೋಪಗೊಂಡನಹಳ್ಳಿ, ಹೊನ್ನಾಳಿ ತಾಲ್ಲೂಕು. ಮಂಜುನಾಥ ಡಿ.ಎಸ್ ಸಹ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಜೀನಹಳ್ಳಿ, ಹೊನ್ನಾಳಿ/ನ್ಯಾಮತಿ ತಾಲ್ಲೂಕು. ಸುಜಾತ ಬಿ. ಮುಖ್ಯ ಶಿಕ್ಷಕರು ಪಂಪಾರೂಢಸ್ವಾಮಿ ಗ್ರಾಮಾಂತರ ಪ್ರೌಢಶಾಲೆ ಹೊನ್ನೂರು, ದಾವಣಗೆರೆ ಉತ್ತರ ವಲಯ.

# ದೇವರಬೆಳಕೆರೆಯಲ್ಲಿ ಸಸ್ಯ ರಾಶಿ ತೆರವು ಕಾರ್ಯಾಚರಣೆ : ಶಾಸಕ ರಾಮಪ್ಪ ಭೇಟಿ



ಮಲೇಬೆನ್ನೂರು, ಸೆ.3- ದೇವರಬೆಳಕೆರೆ ಪಿಕಪ್ ಡ್ಯಾಮ್ ಗೇಟ್‌ಗಳ ಬಳಿ ಸ್ಟಾಕ್ ಆಗಿ ನಿಂತಿರುವ ಸಸ್ಯ ರಾಶಿ ತೆರವು ಕಾರ್ಯಾಚರಣೆ ಶನಿವಾರವೂ ನಡೆಯಿತು.

ಜೆಸಿಬಿ ಮೂಲಕ ಸಸ್ಯರಾಶಿ ತೆಗೆಯುವ ಕಾಮಗಾರಿ ನಡೆಯುತ್ತಿದ್ದು, ಶಾಸಕ ಎಸ್.ರಾಮಪ್ಪ ಭೇಟಿ ನೀಡಿ ವೀಕ್ಷಿಸಿದರು. ಈ ವೇಳೆ ದೇವರಬೆಳಕೆರೆ ಮತ್ತು ಗುಳದಹಳ್ಳಿ, ಸಂಕ್ಲಿಪುರ ಮತ್ತಿತರ ಗ್ರಾಮಗಳ ರೈತರು ಈಗಿರುವ ಗೇಟ್‌ಗಳನ್ನು ಮೊದಲು ತೆಗೆಸಿಹಾಕಿ ಮತ್ತು ಡ್ಯಾಮ್ ಹಿನ್ನೀರಿನಿಂದ ಆಗಿರುವ ಬೆಳೆ ಹಾನಿಗೆ ಪರಿಹಾರ ಕೊಡಿಸುವಂತೆ ಶಾಸಕರನ್ನು ಒತ್ತಾಯಿಸಿದರು. ಆಗ ಸ್ಥಳದಲ್ಲಿದ್ದ ಎಇಇ ಧನುಂಜಯ ಅವರು, ಅತೀ ಶೀಘ್ರದಲ್ಲಿ ಹೊಸ ಗೇಟ್‌ಗಳ ಅಳವಡಿಕೆ ಕಾಮಗಾರಿ ನಡೆಯಲಿದೆ ಎಂದರು.

ನಿವೃತ್ತ ಪೊಲೀಸ್ ಅಧಿಕಾರಿ ಕುಣಿಬೆಳಕೆರೆ ದೇವೇಂದ್ರಪ್ಪ, ದೇವರಬೆಳಕೆರೆ ಮಹೇಶಣ್ಣ, ಸಂಕ್ಲಿಪುರದ ನಿಂಗಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು. ನಂತರ ಭದ್ರಾ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ಅಧ್ಯಕ್ಷ ವೈ. ದ್ಯಾವಪ್ಪರೆಡ್ಡಿ ಆಗಮಿಸಿ, ಕಾಮಗಾರಿ ವೀಕ್ಷಣೆ ಮಾಡಿದರು. ಈ ವೇಳೆ ಅವರು ಭದ್ರಾ ಎಸ್ಇ ಜೊತೆ ಮಾತನಾಡಿ ಸ್ಥಳಕ್ಕೆ ಬಂದು ನೋಡುವಂತೆ ಕರೆದರು.


# ಗುಲಾಬಿ ಹೂವಿನ ಗಣಪತಿ ಪ್ರತಿಷ್ಠಾಪನೆ



ಮಲೇಬೆನ್ನೂರು, ಸೆ.3- ವಿನಾಯಕ ನಗರ (ಜಿಗಳಿ ಕ್ಯಾಂಪ್) ಕ್ಯಾಂಪ್‌ನಲ್ಲಿ ಶ್ರೀ ಸಿದ್ಧಿ ವಿನಾಯಕ ಯುವಕ ಸಂಘದಿಂದ 36 ವರ್ಷದ ಗಣೇಶ ಪ್ರತಿಷ್ಠಾಪನೆಯನ್ನು ಗುಲಾಬಿ ಹೂವಿನಲ್ಲಿ ಮಾಡುವ ಮೂಲಕ ಗಮನ ಸೆಳೆಯಲಾಗಿದೆ. ಭಾನುವಾರ ಈ ಗುಲಾಬಿ ಹೂವಿನ ಗಣಪತಿಯ ವಿಸರ್ಜನೆ ನಡೆಯಲಿದ್ದು, ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

# ಶಕ್ತಿಪ್ರದರ್ಶನಕ್ಕೆ ಮುಂದಾದ ಬಿಎಸ್‌ವೈ

## ತವರು ಜಿಲ್ಲೆಯಲ್ಲಿ ಬೃಹತ್ ಸಮಾವೇಶ, ಪ್ರಧಾನಿ ಭಾಗವಹಿಸುವ ನಿರೀಕ್ಷೆ



ಬೆಂಗಳೂರು, ಸೆ. 3 - ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನಂತರ ಬಿಜೆಪಿಯ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಈಗ ತಮ್ಮ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ.

ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಣೆ ಮಾಡಿಕೊಂಡರೂ, ರಾಜ್ಯ ಬಿಜೆಪಿಯಲ್ಲಿ ನನ್ನದೇ ಪಾರುಪತ್ಯ ಎಂದು ಬಿಂಬಿಸಲು ಯಡಿಯೂರಪ್ಪ ತಮ್ಮ ತವರು ಜಿಲ್ಲೆಯಲ್ಲಿ ಬೃಹತ್ ಸಮಾವೇಶ ನಡೆಸಲು ಮುಂದಾಗಿದ್ದಾರೆ.

ಚುನಾವಣಾ ರಾಜಕೀಯ ನಿವೃತ್ತಿ ಘೋಷಣೆ ಮಾಡಿದ ನಂತರ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್‌ಷಾ ತಮಗೆ ಪಕ್ಷದಲ್ಲಿ ನೀಡುತ್ತಿರುವ ಆದ್ಯತೆಯಿಂದ ಬಿಗಿರುವ ಅವರು ಶಕ್ತಿ ಪ್ರದರ್ಶನದ ಮೂಲಕ ತಮ್ಮನ್ನು ವಿರೋಧಿಸುವ ರಾಜ್ಯ ಬಿಜೆಪಿಯ ಒಂದು ವರ್ಗಕ್ಕೂ ಚಾಟಿ ಬೀಸಲು ಹೊರಟಿದ್ದಾರೆ.

ಈ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸಲಿದ್ದಾರೆ. ಗುರುವಾರ ಮಂಗಳೂರಿನಲ್ಲಿ ಮೋದಿ ಅವರ ಸಮ್ಮುಖದಲ್ಲಿ ನಡೆದ ಬಿಜೆಪಿ ಮುಖಂಡರ ಸಭೆಯಲ್ಲೇ ಯಡಿಯೂರಪ್ಪ, ಪ್ರಧಾನಿಗೆ ಆಹ್ವಾನ ನೀಡಿದರು.

ಇದಕ್ಕೆ ತಕ್ಷಣ ಸ್ಪಂದಿಸಿದ ಪ್ರಧಾನಿಯವರು ಅಕ್ಟೋಬರ್ ತಿಂಗಳಲ್ಲಿ ಮತ್ತೆ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದು, ತಮ್ಮ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸುವುದಾಗಿ ತಿಳಿಸಿದ್ದಾರೆ.

ಸಂಸದೀಯ ಮಂಡಳಿಯಲ್ಲಿ ತಮಗೆ ಸ್ಥಾನಮಾನ ಕಲ್ಪಿಸಿರುವುದಕ್ಕೆ ಪ್ರಧಾನಿಯವರನ್ನು ಕಾರ್ಯಕರ್ತರ ಸಮ್ಮುಖದಲ್ಲೇ ಸನ್ಮಾನಿಸಲು ಯಡಿಯೂರಪ್ಪ ನಿರ್ಧರಿಸಿದ್ದಾರೆ.

# ಪ್ರಕರಣಕ್ಕೆ ತಿರುವು

(1ನೇ ಪುಟದಿಂದ) ಅವರ ಮನೆಯಲ್ಲೇ ಇರುವುದಾಗಿ ಹೇಳಿದಳು. ಹುಡುಗಿಯ ವಿದ್ಯಾಭ್ಯಾಸ, ಉದ್ಯೋಗ, ವಿವಾಹ ಎಲ್ಲ ವಿಷಯ ನಾವೇ ನೋಡಿಕೊಳ್ಳು ತ್ತೇವೆ ಎಂದು ಬಸವರಾಜನ್ ಹಾಗೂ ಅಜ್ಜಪ್ಪ ಭರವಸೆ ನೀಡಿದರು. ಅವರು ಹೇಳಿದಂತೆ ಆಗಲಿ ಎಂದು ನಾನು ಮನೆಗೆ ಮರಳಿದ್ದೆ. ಇದಾದ ನಂತರ 29.08.2022 ರಂದು ಅಜ್ಜಪ್ಪ ಕರೆ ಮಾಡಿ, ಬಸವರಾಜನ್ ಅವರು ಕರೆಯುತ್ತಿದ್ದಾರೆ ಬರಬೇಕು ಎಂದು ಹೇಳಿದರು. ಕೆಲಸದ ಒತ್ತಡದಿಂದ ಹೋಗಲು ಸಾಧ್ಯವಾಗಲಿಲ್ಲ ಎಂದು ಚಿಕ್ಕಪ್ಪ ದೂರಿನಲ್ಲಿ ಹೇಳಿದ್ದಾರೆ.

ಇದಾದ ನಂತರ ಮುರುಘಾ ಶರಣರ ಮೇಲೆ ನನ್ನ ಅಣ್ಣನ ಮಗಳು ಆರೋಪ ಮಾಡಿರುವುದು ತಿಳಿದು ಬಂತು. ಅಣ್ಣನ ಮಗಳನ್ನು ಒಂದೂವರೆ ತಿಂಗಳ ಹಿಂದೆ ನನ್ನ ಜೊತೆ ಕಳುಹಿಸಿ ಕೊಟ್ಟಿರುವುದಾಗಿ ಬಸವರಾಜನ್ ಹೇಳಿದ್ದಾರೆ. ಆದರೆ, ನನ್ನ ಅಣ್ಣನ ಮಗಳನ್ನು ಮಾತನಾಡಿಸಿಕೊಂಡು ಬಂದಾಗಿನಿಂದಲೂ, ಆಕೆ ಬಸವರಾಜನ್ ಮನೆಯಲ್ಲೇ ಇದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

# ನಗರಕ್ಕೆ ನಾಳೆ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಉಮಾಶಂಕರ್

ದಾವಣಗೆರೆ, ಸೆ.3- ಸಹಕಾರ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಅವರು ನಾಡಿದ್ದು ದಿನಾಂಕ 5 ರ ಸೋಮವಾರ ನಗರಕ್ಕೆ ಆಗಮಿಸಲಿದ್ದಾರೆ. ಅಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಅವರು, ಜಿಲ್ಲಾ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನೆ ನಡೆಸುವರು. ನಂತರ ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆ ಅಭಿವೃದ್ಧಿ ಪರಿಶೀಲಿಸುವರು. ಸಂಜೆ 6 ಗಂಟೆಗೆ ಬೆಂಗಳೂರಿಗೆ ತೆರಳುವರು.

# ನಗರದಲ್ಲಿ ಇಂದಿನಿಂದ 3 ದಿನ ಮದ್ಯ ಮಾರಾಟ ನಿಷೇಧ

ಗಣೇಶ ಪ್ರತಿಷ್ಠಾಪನೆ ಮತ್ತು ವಿಸರ್ಜನೆ ಸಂಬಂಧ ಗಣೇಶ ಮೂರ್ತಿಗಳನ್ನು ಮೆರವಣಿಗೆ ಮುಖಾಂತರ ವಿಸರ್ಜನಾ ಸ್ಥಳಗಳಿಗೆ ತೆಗೆದುಕೊಂಡು ಹೋಗಲಿದ್ದು, ಈ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಅತೀ ಅವಶ್ಯಕವಾಗಿರುತ್ತದೆ ಪ್ರಯುಕ್ತ ಮದ್ಯ ಮಾರಾಟ ಮತ್ತು ಸರಬರಾಜನ್ನು ಇಂದು ಮತ್ತು ಇದೇ ದಿನಾಂಕ 8 ರ ಗುರುವಾರ ಬೆಳಿಗ್ಗೆ 6 ರಿಂದ ಮಧ್ಯರಾತ್ರಿ 12 ಗಂಟೆವರೆಗೆ ನಿಷೇಧಗೊಳಿಸಲು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಆದೇಶಿಸಿದ್ದಾರೆ.

# ವರ್ಷವಿಡೀ ಹೈದರಾಬಾದ್ ವಿಮೋಚನೆ ಆಚರಣೆ

ನವದೆಹಲಿ, ಸೆ. 3 – ಹೈದರಾಬಾದ್ ವಿಮೋಚನೆಗೆ 75 ವರ್ಷ ತುಂಬಿರುವುದನ್ನು ವರ್ಷವಿಡೀ ಆಚರಿಸಲು ಹಾಗೂ ಈ ಕಾರ್ಯಕ್ರಮಗಳಿಗೆ ತೆಲಂಗಾಣ, ಕರ್ನಾಟಕ ಹಾಗೂ ಮಹಾರಾಷ್ಟ್ರಗಳ ಮುಖ್ಯಮಂತ್ರಿಗಳನ್ನು ಆಹ್ವಾನಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ದಿನಾಂಕ 17ರಿಂದ ಹೈದರಾಬಾದ್ ರಾಜ್ಯ ವಿಮೋಚನಾ ಆಚರಣೆ ಆರಂಭವಾಗಲಿದೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಕರ್ನಾಟಕ, ತೆಲಂಗಾಣ ಹಾಗೂ ಮಹಾರಾಷ್ಟ್ರಗಳ ಮುಖ್ಯಮಂತ್ರಿಗಳಿಗೆ ಕೇಂದ್ರ ಸಂಸ್ಕೃತಿ ಖಾತೆ ಸಚಿವ ಜಿ. ಕಿಶನ್ ರೆಡ್ಡಿ ಅವರು ಪತ್ರ ಬರೆದಿದ್ದಾರೆ. ವರ್ಷವಿಡೀ ಕಾರ್ಯಕ್ರಮಗಳನ್ನು ಆಯೋಜಿಸಲು ಮುಖ್ಯಮಂತ್ರಿಗಳಿಗೆ ರೆಡ್ಡಿ ತಿಳಿಸಿದ್ದಾರೆ.





**ಶಿಕ್ಷಕರಿಗೆ ಉಚಿತ ತಪಾಸಣೆ ಶಿಬಿರ**

ಶಿಕ್ಷಕರ ದಿನದ ಪ್ರಯುಕ್ತ ಇದೇ ಮೊದಲ ಬಾರಿಗೆ ಶಿಕ್ಷಣ ಕ್ಷೇತ್ರದವರಿಗೆ ಎಲ್ಲಾ ತರಹದ ರೋಗಗಳಿಗೆ ಉಚಿತ ತಪಾಸಣೆ ನಡೆಸಿ ಶೇ. 20-40 ರಷ್ಟು ಚಿಕಿತ್ಸೆಯಲ್ಲಿ ರಿಯಾಯಿತಿ ನೀಡಲಾಗುವುದು.

*ವಿ.ಸೂ. : ಶಿಕ್ಷಕರ (ಶಾಲೆ/ಕಾಲೇಜು) ಗುರುತಿನ ಚೀಟಿ ತರುವುದು ಕಡ್ಡಾಯ*
**ತಪಾಸಣೆ ದಿನಾಂಕ : 4.9.2022 ರಿಂದ 7.09.2022ರವರೆಗೆ.**
*ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :*

ANVAYA **ಅನ್ವಯ ಆಯುರ್ವೇದ ಆಸ್ಪತ್ರೆ**
#1981, 10ನೇ ಕ್ರಾಸ್, ಎಂಸಿಸಿ ಎ ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ.
**08192 - 252228, 86186 42929**

**ಭವಾನಿ ಸ್ಪೆಷಾಲಿಟಿ ಕ್ಲಿನಿಕ್**

508, ಸ್ವಾಗೇರ್ ಪೇಟೆ ಬಸವಣ್ಣ ದೇವಸ್ಥಾನ ಹತ್ತಿರ, (ಕಾಯಿಪೇಟೆ) ದಾವಣಗೆರೆ.

**ಉಚಿತ ಆರೋಗ್ಯ ತಪಾಸಣಾ ಶಿಬಿರ**

ದಿನಾಂಕ : 05.09.2022 ರಿಂದ 15.09.2022 ರವರೆಗೆ
ಬೆಳಿಗ್ಗೆ : 11.00 ರಿಂದ 01.30ರವರೆಗೆ ಮತ್ತು
ಸಂಜೆ 06.00 ರಿಂದ 08.30 ರವರೆಗೆ

* ಗರ್ಭಿಣಿ ಸ್ತ್ರೀಯರ ತಪಾಸಣೆ ಸಮಾಲೋಚನೆ
* ಸ್ತ್ರೀಯರ ಆರೋಗ್ಯ ತಪಾಸಣೆ ಮತ್ತು (PCOS) ಸಮಸ್ಯೆ
* ಬಂಜೆತನ ಚಿಕಿತ್ಸೆ * ಮುಟ್ಟಿನ ಸಮಸ್ಯೆ * ಕೆಮ್ಮು * ನೆಗಡಿ
* ಶೀತ * ಜ್ವರ * ಮೈ * ಕೈ ನೋವು * ರಕ್ತದೊತ್ತಡ (ಬಿ.ಪಿ.)
* ಸಕ್ಕರೆ ಕಾಯಿಲೆ (ಶುಗರ್ ಟೆಸ್ಟ್) ಹಾಗೂ ಇತರೆ ಸಾಂಕ್ರಾಮಿಕ ರೋಗಗಳ ಸಮಸ್ಯೆ ಇರುವವರು ಇದರ ಸದುಪಯೋಗ ಪಡೆದುಕೊಳ್ಳಿ.

**ವೈದ್ಯರೊಂದಿಗೆ ಚಿಕಿತ್ಸೆಗಾಗಿ ಸಂಪರ್ಕಿಸಿ :**

ಡಾ|| ಲಕ್ಷ್ಮಿ ಆರ್.ಪಿ.
MBBS., MD., ಸಲಹಾ ತಜ್ಞರು

ಡಾ|| ಪ್ರವೀಣ್ ಕುಮಾರ್ ಕೆ.ಎಸ್.
MBBS., DGO., MS., OBG.,
ಹೆರಿಗೆ ಮತ್ತು ಸ್ತ್ರೀರೋಗ ಹಾಗೂ ಬಂಜೆತನ ಚಿಕಿತ್ಸಾ ತಜ್ಞರು

**ಸಂಪರ್ಕಿಸಿ :**
**ಫೋನ್ : 98804 91579**

# ನವೀಕೃತ ಜೋಯಾಲುಕ್ಕಾಸ್ ಉದ್ಘಾಟನೆ



ದಾವಣಗೆರೆ, ಸೆ. 3- ನಗರದ ಪಿ.ಬಿ. ರಸ್ತೆಯಲ್ಲಿ ನವೀಕೃತ ಜೋಯಾಲುಕ್ಕಾಸ್ ಇಂದು ಉದ್ಘಾಟಿಸಲಾಯಿತು. ಜೋಯಾಲುಕ್ಕಾಸ್ ಮರು ಉದ್ಘಾಟಿಸಿದ ಮಹಾನಗರ ಪಾಲಿಕೆ ಮೇಯರ್ ಆರ್. ಜಯಮ್ಮ ಗೋಪಿನಾಯ್ಕ ಅವರು, ಅತ್ಯಾಧುನಿಕ ಶೈಲಿಯ ಸುಂದರ ಆಭರಣಗಳಿವೆ. ಸ್ಥಳೀಯರು ಸದುಪಯೋಗ ಪಡೆಯಬೇಕು ಎಂದು ಕರೆ ನೀಡಿದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಚಿತ್ರನಟಿ ರಚನಾ ಇಂದರ್, ಆಭರಣಗಳು ಮಹಿಳೆಯರ ಅಂದವನ್ನು ಮತ್ತಷ್ಟು ಹೆಚ್ಚಿಸುತ್ತವೆ. ಇಲ್ಲಿ ಎಲ್ಲಾ ಮಹಿಳೆಯರೂ ಇಷ್ಟ ಪಡುವಂತಹ ಅತ್ಯುತ್ತಮ ಶೈಲಿಯ ಆಭರಣಗಳಿವೆ ಎಂದು ಹೇಳಿದರು.

ಹಿರಿಯ ಲೆಕ್ಕ ಪರಿಶೋಧಕ ಅಥಣಿ ವೀರಣ್ಣ, ಉದ್ಯಮಿ ಅಣಬೇರು ರಾಜಣ್ಣ, ಎ.ವಿ.ಕೆ. ಕಾಲೇಜು ಪ್ರಾಂಶುಪಾಲ ಡಾ.ಬಿ.ಪಿ. ಕುಮಾರ್, ರೀಟೇಲ್ ಮ್ಯಾನೇಜರ್‌ಗಳಾದ ಪ್ರಸನ್ನಕುಮಾರ್, ರಾಜೇಶ್ ಕೃಷ್ಣನ್, ರೀಜನಲ್ ಮ್ಯಾನೇಜರ್ ಜಿನೇಶ್, ಸಹಾಯಕ ಮಾರ್ಕೆಟಿಂಗ್ ಮ್ಯಾನೇಜರ್ ಸಜು ಪೌಲ್ ಇತರರು ಈ ಸಂದರ್ಭದಲ್ಲಿದ್ದರು.

ಗ್ರಾಹಕರ ಅನುಕೂಲ ಗಮನದಲ್ಲಿಟ್ಟುಕೊಂಡು ವಿಪುಲ ಪಾರ್ಕಿಂಗ್ ಹಾಗೂ ಶಾಪಿಂಗ್ ಆವರಣದ ಜೊತೆಗೆ ಆಧುನಿಕತೆಯೊಂದಿಗೆ ನವೀಕರಿಸಿದ ಶೋರೂಂ ಆರಂಭಿಸಲಾಗಿದೆ. ಮಳಿಗೆಯ ಪುನಾರಾರಂಭ ಸಂಭ್ರಮದ ಹಿನ್ನೆಲೆಯಲ್ಲಿ ಗ್ರಾಹಕರು ಕನಿಷ್ಟ 50 ಸಾವಿರ ರೂ. ಮೌಲ್ಯದ ಆಭರಣವನ್ನು ಸೆ.3 ರಿಂದ5ರವರೆಗೆ ಖರೀದಿಸಿದರೆ 200 ಮಿ.ಗ್ರಾಂ ಚಿನ್ನದ ನಾಣ್ಯ ನೀಡಲಾಗುವುದು. ವಜ್ರಾಭರಣಗಳ ಮೇಲೆ ಶೇ.25ರಷ್ಟು ರಿಯಾಯಿತಿ ಇದೆ ಎಂದು ಅಸಿಸ್ಟೆಂಟ್ ಬ್ರಾಂಚ್ ಇನ್‌ಚಾರ್ಜ್ ಎಂ.ಪಿ. ಬಾಲಕೃಷ್ಣ ಮಾಹಿತಿ ನೀಡಿದರು.

# ಕರಾವಳಿ ಸೌಹಾರ್ದ ಸಹಕಾರಿಗೆ 66.13 ಲಕ್ಷ ರೂ. ಲಾಭ

ದಾವಣಗೆರೆ, ಸೆ. 3- ನಗರದ ಪ್ರತಿಷ್ಠಿತ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಗಳಲ್ಲೊಂದಾದ ಕರಾವಳಿ ಸೌಹಾರ್ದ ಪತ್ತಿನ ಸಹಕಾರಿಯು ವರ್ಷದಿಂದ ವರ್ಷಕ್ಕೆ ಲಾಭ ಗಳಿಕೆಯಲ್ಲಿ ಪ್ರಗತಿ ಸಾಧಿಸಿದೆ ಎಂದು ಸಂಘದ ಅಧ್ಯಕ್ಷ ಸಿ.ಎ. ಉಮೇಶ್ ಶೆಟ್ಟಿ ಹರ್ಷ ವ್ಯಕ್ತಪಡಿಸಿದರು.

ಈಚೆಗೆ ನಗರದ ಕುಂದುವಾಡ ರಸ್ತೆಯ ಡಾ. ಶ್ಯಾಮಸುಂದರ ಶೆಟ್ಟಿ ಬಂಟರ ಭವನದಲ್ಲಿ ಏರ್ಪಾಡಾಗಿದ್ದ ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ ಪ್ರಸಕ್ತ ಸಾಲಿನ 22ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸಕ್ತ ವರ್ಷ 23.41 ಲಕ್ಷ ರೂಗಳ ಸವಕಳಿ ತೆಗೆದು, ನಿವ್ವಳ ರೂ. 66.13 ಲಕ್ಷಗಳಷ್ಟು ಲಾಭ ಗಳಿಸಿದ್ದು, ಒಟ್ಟು 568.02 ಲಕ್ಷಗಳಷ್ಟು ಸ್ವಂತ ನಿಧಿ ಹೊಂದಿದೆ. ವರದಿ ಸಾಲಿನ ಅಂತ್ಯಕ್ಕೆ ವಿವಿಧ ಸದಸ್ಯರುಗಳಿಂದ ಒಟ್ಟು 1997.37 ಲಕ್ಷಗಳಷ್ಟು ಸಾಲ ನೀಡಿದ್ದು, ನಗರದಲ್ಲಿ ಸ್ವಂತ ಕಟ್ಟಡದೊಂದಿಗೆ ಜಿಲ್ಲೆಯಲ್ಲಿಯೇ ಮುಂಚೂಣಿ ಸಹಕಾರಿ ಸಂಘಗಳಲ್ಲಿ ಒಂದಾಗಿದ್ದು, ಇದಕ್ಕೆ ಸಹಕರಿಸಿದ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ, ಪಿಗ್ಮಿ ಏಜೆಂಟರುಗಳು ಹಾಗೂ ಸಂಘದ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಧನ್ಯವಾದ ಅರ್ಪಿಸಿದರು.

ಈ ವರ್ಷ ನಮ್ಮ ಸಂಘದ ವತಿಯಿಂದ 3 ಜನ ಮಹಿಳಾ ಪೌರ ಕಾರ್ಮಿಕರನ್ನು ಸನ್ಮಾನಿಸಿ, ನೆನಪಿನ ಕಾಣಿಕೆ ನೀಡಿ, ಗೌರವಿಸಿರುವುದು ತುಂಬಾ ಸಂತೋಷವಾಗಿದೆ. ಪ್ರತಿ ವರ್ಷ ಈ ಕಾರ್ಯ ಮುನ್ನಡೆಸುವುದಾಗಿ ತಿಳಿಸಿ, ಪೌರ ಕಾರ್ಮಿಕರ ಸೇವೆಯನ್ನು ಗುರುತಿಸಿ, ಗೌರವಿಸುವುದು ಸಂಘ-ಸಂಸ್ಥೆಗಳ ಆದ್ಯ ಕರ್ತವ್ಯ ಎಂದು ತಿಳಿಸಿದರು. ಸುಸ್ತಿ ಸಾಲಗಾರರ ಬಗ್ಗೆ ಮಾತನಾಡುತ್ತಾ, ಸಂಘದ ಸುಸ್ತಿ ಸಾಲಗಾರರ ವಿರುದ್ಧ ಸೌಹಾರ್ದ ಸಹಕಾರಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಅನಗತ್ಯವಾಗಿ ತಮ್ಮ ದುಡಿಮೆಯ ಫಲದ ಆಸ್ತಿಯನ್ನು ಹರಾಜಿಗೆ ಅವಕಾಶ ನೀಡದೇ ಅತೀ ಶೀಘ್ರದಲ್ಲಿ ಸಾಲ ಮರುಪಾವತಿ ಮಾಡಬೇಕೆಂದು ಉಮೇಶ್ ಶೆಟ್ಟಿ ಕಿವಿಮಾತು ಹೇಳಿದರು.



**ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿ ಅಧ್ಯಕ್ಷ ಉಮೇಶ್ ಶೆಟ್ಟಿ ಹರ್ಷ**

ನಿರ್ದೇಶಕ ಎಸ್. ಸೀತಾರಾಮ್ ಶೆಟ್ಟಿ ಶೇ. 14 ಲಾಭಾಂಶ ಘೋಷಣೆ ಮಂಡಿಸಿ, 2022-23ನೇ ಸಾಲಿನ ಆಯ-ವ್ಯಯವನ್ನು ಮಂಡಿಸಿದರು. ಕಾರ್ಯನಿರ್ವಹಣಾಧಿಕಾರಿ ಖಲೀಲ್ ಅಹ್ಮದ್ ಪ್ರಸಕ್ತ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಓದಿ ಒಪ್ಪಿಗೆ ಪಡೆಯಲಾಯಿತು. ಸಂಘದ ಅಧ್ಯಕ್ಷ ಸಿ.ಎ. ಉಮೇಶ್ ಶೆಟ್ಟಿ ಅವರು ಉಪವಿಧಿಗಳ ತಿದ್ದುಪಡಿ ಹಾಗೂ ಉಪಾಧ್ಯಕ್ಷ ಮಹೇಶ್ ಆರ್. ಶೆಟ್ಟಿ ಅವರು 2021-22ನೇ ಸಾಲಿನ ಪರಿಶೋಧಿತ ಲೆಕ್ಕಪತ್ರ ಮಂಡಿಸಿದರು.

ಇದೇ ಸಂದರ್ಭದಲ್ಲಿ ಪ್ರಸಕ್ತ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಿದ ಸಂಘದ ಸದಸ್ಯರುಗಳ ಒಟ್ಟು 32 ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಲಾಯಿತು. ಶ್ರೀಕಾಂತ್ ಭಟ್ ಕಾರ್ಯಕ್ರಮ ನಿರೂಪಿಸಿದರು. ಡಾ. ನಿತಿನ್ ರಾಜ್ ಶೆಟ್ಟಿ ವಂದಿಸಿದರು.

# ಎಸ್ಸೆಸ್ಸೆಂ ನಿವಾಸಕ್ಕೆ ಕಣ್ವಕುಪ್ಪೆ ಗವಿಮಠದ ಸ್ವಾಮೀಜಿ



ದಾವಣಗೆರೆ ಸೆ. 3 - ಜಗಳೂರು ತಾಲ್ಲೂಕಿನ ಕೇದಾರ ಪಂಚಪೀಠದ ಕಣ್ವಕುಪ್ಪಿ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಮಹಾ ಸ್ವಾಮೀಜಿಯವರು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ಅವರ ನಿವಾಸಕ್ಕೆ ಇಂದು ಭೇಟಿ ನೀಡಿದ್ದರು.

ಸ್ವಾಮೀಜಿಯವರನ್ನು ಆತ್ಮೀಯವಾಗಿ ಬರಮಾಡಿಕೊಂಡ ಶಾಮನೂರು ಶಿವಶಂಕರಪ್ಪ ಅವರಲ್ಲದೇ, ಅವರ ಪುತ್ರ - ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಮತ್ತು ಶ್ರೀಮತಿ ಪ್ರಭಾ ದಂಪತಿ ಹಾಗೂ ಅವರ ಕುಟುಂಬ ವರ್ಗದವರು ಪಾದಪೂಜೆ ನೆರವೇರಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಅಜ್ಜಂಪುರ ರಾಜು, ಕಂಚಿಕೇರಿ ಮಹೇಶ್, ಕೈಗಾರಿಕೋದ್ಯಮಿ ಎಸ್.ಜಿ. ಉಳುವಯ್ಯ, ರಾಜು ಅಕ್ಕಿ, ಶಿವಗಂಗಾ ಬಸವರಾಜ್, ಶಾಮನೂರು ಕುಟುಂಬ ಸದಸ್ಯರು, ಭಕ್ತರು ಉಪಸ್ಥಿತರಿದ್ದು, ಸ್ವಾಮಿಗಳ ಆರ್ಶಿವಾದ ಪಡೆದರು.

# ರೇಜರ್‌ಪೇ, ಪೇಟಿಎಂ, ಕ್ಯಾಶ್‌ಫ್ರೀ ಕಚೇರಿಗಳ ಮೇಲೆ ದಾಳಿ

**ಚೀನೀ ಆಪ್ ಸಾಲ ಪ್ರಕರಣ**

ನವದೆಹಲಿ, ಸೆ. 3 – ಆಪ್ ಮೂಲಕ ತ್ವರಿತ ಸಾಲದ ಹೆಸರಿನಲ್ಲಿ ಚೀನಾದ ವ್ಯಕ್ತಿಗಳು ನಡೆಸಿರುವ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆನ್‌ಲೈನ್ ಪಾವತಿ ಸಂಸ್ಥೆಗಳಾದ ರೇಜರ್‌ಪೇ, ಪೇಟಿಎಂ ಹಾಗೂ ಕ್ಯಾಶ್‌ಫ್ರೀ ಕಂಪನಿಗಳ ಬೆಂಗಳೂರು ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ.

ಶುಕ್ರವಾರದಂದು ಬೆಂಗಳೂರಿನಲ್ಲಿ ಈ ಸಂಸ್ಥೆಗಳು ಹೊಂದಿರುವ 6 ತಾಣಗಳ ಮೇಲೆ ದಾಳಿ ನಡೆಸಲಾಗಿದೆ. ಶೋಧ ಶನಿವಾರವೂ ಮುಂದುವರೆದಿದೆ ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

ಚೀನಾ ವ್ಯಕ್ತಿಗಳ ನಿಯಂತ್ರಣದಲ್ಲಿರುವ ಸಂಸ್ಥೆಗಳ ಮರ್ಚೆಂಟ್ ಐ.ಡಿ. ಹಾಗೂ ಬ್ಯಾಂಕ್ ಖಾತೆಗಳಿಂದ 17 ಕೋಟಿ ರೂ. ವಶಪಡಿಸಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ.

ಚೀನಾದ ವ್ಯಕ್ತಿಗಳು ತ್ವರಿತ ಸಾಲ ನೀಡುವ ಆಪ್ ಆಧರಿತ ಕಂಪನಿಗಳನ್ನು ಸ್ಥಾಪಿಸುತ್ತಿದ್ದವು. ಇವುಗಳಿಗೆ ಭಾರತೀಯರ ದಾಖಲೆಗಳನ್ನು ಫೋರ್ಜರಿ ಮಾಡಿ, ಅವರನ್ನು ಡಮ್ಮಿ ನಿರ್ದೇಶಕರೆಂದು ತೋರಿಸುತ್ತಿದ್ದವು. ಚೀನಾದ ವ್ಯಕ್ತಿಗಳೇ ಇಡೀ ಜಾಲ ನಿಯಂತ್ರಿಸುತ್ತಿದ್ದರು ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

ಈ ಕಂಪನಿಗಳು ಕ್ಯಾಶ್‌ಫ್ರೀ ಪೇಮೆಂಟ್ಸ್, ಪೇಟಿಎಂ ಪೇಮೆಂಟ್ಸ್ ಹಾಗೂ ರೇಜರ್‌ಪ್ಲೈ ಖಾತೆಗಳನ್ನು ಬಳಸುತ್ತಿದ್ದ ಬಗ್ಗೆ ಶೋಧ ನಡೆಸಲಾಗಿದೆ ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

# ಡ್ರೋನ್ ಮೂಲಕ ಕಸಿ ಅಂಗ ರವಾನೆ ಯೋಜನೆ ಅನಾವರಣ

ಚೆನ್ನೈ, ಸೆ. 3 – ತ್ವರಿತವಾಗಿ ಅಂಗಗಳನ್ನು ಆಸ್ಪತ್ರೆಗಳಿಗೆ ಡ್ರೋನ್ ಮೂಲಕ ರವಾನಿಸುವ ಮಾದರಿಯನ್ನು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅನಾವರಣಗೊಳಿಸಿದ್ದಾರೆ. ಈ ಯೋಜನೆಯ ಮೂಲಕ ಕಸಿ ಮಾಡುವ ಅಂಗಗಳನ್ನು ವಿಮಾನ ನಿಲ್ದಾಣದಿಂದ ಆಸ್ಪತ್ರೆಗಳಿಗೆ ರವಾನಿಸಲಾಗುವುದು. ಪ್ರಸಕ್ತ ಅಂಗಗಳನ್ನು ರಸ್ತೆ ಮೂಲಕ ಸಾಗಿಸಲಾಗುತ್ತಿದೆ. ಡ್ರೋನ್ ಬಳಕೆಯಿಂದ ಸಾಕಷ್ಟು ಸಮಯ ಉಳಿಯಲಿದೆ. ಈಗಿರುವ ಡ್ರೋನ್‌ಗಳನ್ನು ಬಳಸಿ ಅಂಗಗಳನ್ನು 20ಕಿ.ಮೀ.ಗಳವರೆಗೆ ಸಾಗಿಸಬಹುದು ಎಂದು ತಂತ್ರಜ್ಞಾನ ರೂಪಿಸುವಲ್ಲಿ ಭಾಗಿಯಾಗಿದ್ದ ಎಂ.ಜಿ.ಎಂ. ಹೆಲ್ತ್‌ಕೇರ್ ನಿರ್ದೇಶಕ ಡಾ. ಪ್ರಶಾಂತ್ ರಾಜಗೋಪಾಲನ್ ತಿಳಿಸಿದ್ದಾರೆ.

# ಶಿರಮನಳ್ಳಿಯಲ್ಲಿ ವಿಜೃಂಭಣೆಯ ಗಣೇಶೋತ್ಸವ - ಅನ್ನ ಸಂತರ್ಪಣೆ



ದಾವಣಗೆರೆ, ಸೆ. 3- ಶಿರಮಗೊಂಡನ ಹಳ್ಳಿಯ ಶ್ರೀ ಸಿದ್ಧಿವಿನಾಯಕ ಗೆಳೆಯರ ಬಳಗದಿಂದ ಶ್ರೀ ಗಣೇಶೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ನಿನ್ನೆ ಸದ್ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಾಡಿಸಲಾಗಿತ್ತು. ನಂತರ ಶ್ರೀ ಗಣಪತಿ ಮೂರ್ತಿಯನ್ನು ವಿಸರ್ಜಿಸಲಾಯಿತು.

# ಬಂಬೂಬಜಾರ್‌ನಲ್ಲಿ ಇಂದು ರಸಮಂಜರಿ

ದಾವಣಗೆರೆ ಬಂಬೂ ಬಜಾರ್‌ನಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಹಾಗೂ ಮೇದಾರ ಗಿರಿಜನ ಅಭ್ಯುದಯ ಸೇವಾ ಸಂಘದ ಆಶ್ರಯದಲ್ಲಿ 50ನೇ ವರ್ಷದ ಶ್ರೀ ಗಣೇಶ ಸುವರ್ಣ ಮಹೋತ್ಸವವು ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯುತ್ತಿದ್ದು, ಇಂದು ಸಂಜೆ 6 ಗಂಟೆಗೆ ರಸಮಂಜರಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

## ಕಾಣೆಯಾಗಿದ್ದಾರೆ

ದಾವಣಗೆರೆಯ ಜಾಲಿನಗರ, ಡೋರ್ ನಂ. # 208, 2ನೇ ಮೇನ್, 4ನೇ ಕ್ರಾಸ್ ವಾಸಿ **ಜಿ.ಹೆಚ್.ಸಿದ್ದಲಿಂಗೇಶ್ವರ ಇವರ ಪತ್ನಿ ಶಾಂತಾ.ಎಸ್.** ವಯಸ್ಸು 32 ವರ್ಷ, ಇವರು, ದಿನಾಂಕ 22.8.2022ರ ಸೋಮವಾರ ಬೆಳಿಗ್ಗೆ 6.45 ಗಂಟೆಗೆ ಜಾಲಿನಗರದ ಮನೆಯಿಂದ ಕಾಣೆಯಾಗಿದ್ದಾರೆ. ಯಾರಿಗಾದರೂ ಇವರ ಸುಳಿವು ಸಿಕ್ಕಲ್ಲಿ ಈ ಕೆಳಗಿನ ನಂಬರ್‌ಗೆ ಸಂಪರ್ಕಿಸಲು ಕೋರಿದೆ.

**87222 61277**

# ಐದನೇ ವರ್ಷದ ಪುಣ್ಯಸ್ಮರಣೆ



## ದಿ|| ಶ್ರೀ ಜೈ ಸಿಂಗ್ (ಜಯಣ್ಣ)

ಜನನ : 01.06.1954, ಮರಣ 04.09.2017

(ದಿ|| ಶ್ರೀ ಗಂಗಾರಾಮ್ ಸಿಂಗ್ ಇವರ ದ್ವಿತೀಯ ಪುತ್ರ)

ಮಾಲೀಕರು : **ಶ್ರಮಜೀವಿ ಮಷೀನ್ ಟೆಕ್ ದಾವಣಗೆರೆ.**

ತಾವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ....

ದುಃಖತಪ್ತರು :

ಶ್ರೀಮತಿ ಶಶಿಕಲಾ ಜೈ ಸಿಂಗ್, ಶ್ರೀಮತಿ ಸೌಮ್ಯ ಮತ್ತು ವಿವೇಕ್ ಸಿಂಗ್ (ಗಣೇಶ್)
ಶ್ರೀಮತಿ ನಂದಿನಿ ಮತ್ತು ಶ್ರೀ ಭಗವಾನ್ ಸಿಂಗ್
ಶ್ರೀಮತಿ ನವ್ಯ ಸಿಂಗ್ ಮತ್ತು ವಿಶಾಲ್ ಸಿಂಗ್

ಸಹೋದರರಾದ : ಶ್ರೀ ಪ್ರತಾಪ್ ಸಿಂಗ್, ಶ್ರೀ ಮಹೇಂದ್ರ ಸಿಂಗ್
ಶ್ರೀ ಅನಿಲ್ ಕುಮಾರ್ ಸಿಂಗ್, ದಾವಣಗೆರೆ. ಮೊ. : 98866 50977, 94497 74461
ಮತ್ತು ಇಂಡಸ್ಟ್ರೀಗಳ ಆಡಳಿತ ಮಂಡಳಿ, ಕಾರ್ಮಿಕ ವರ್ಗ, ಬಂಧುಗಳು-ಹಿತೈಷಿಗಳು.

ಸ್ಥಾಪನೆ : 2-3-2009, ರಿ. ನಂ. ಎ.ಆರ್.31/ಆರ್.ಜಿ.ಎನ್./29261/2008-09
ಆದೇಶ ಸಂಖ್ಯೆ : ಸಿ.ಆರ್./ಡಿವಿಜಿ/ಆರ್.ಎಸ್.ಆರ್/ಎ.ಎಂ.ಡಿ/19/15-16

# ಕನಕ ವಿವಿದೋದ್ದೇಶ ಸಹಕಾರ ಸಂಘ ನಿ.,(ರಿ)

ಮುಖ್ಯ ಕಛೇರಿ : ಹದಡಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. ಫೋನ್ : 08192-218555
ಉಪಶಾಖೆ : 1ನೇ ಉಪಘಟಕ-ತ್ಯಾವಣಿಗೆ. 2ನೇ ಉಪಘಟಕ-ದಾವಣಗೆರೆ.



ಎ.ಹೆಚ್. ನಾಗರಾಜ್
ಅಧ್ಯಕ್ಷರು

## 2021-22ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸ್

ಕನಕ ವಿವಿದೋದ್ದೇಶ ಸಹಕಾರ ಸಂಘ ನಿ., (ರಿ) ಹದಡಿ. ಇದರ 2021-22ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 05-09-2022ನೇ ಸೋಮವಾರ ಬೆಳಿಗ್ಗೆ 12-00ಕ್ಕೆ ಸಂಘದ ಆವರಣದಲ್ಲಿ, ಹದಡಿ, ದಾವಣಗೆರೆ ತಾ|| ಜಿಲ್ಲೆ. ಸಂಘದ ಅಧ್ಯಕ್ಷರಾದ ಶ್ರೀ ಎ.ಹೆಚ್. ನಾಗರಾಜ್ ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ : ಎಲ್. ಯೋಗಿಶ್, ಕಾರ್ಯದರ್ಶಿ



ಎಂ.ಆರ್. ಇಂದಿರಾ ದಳವಾಯಿ
ಉಪಾಧ್ಯಕ್ಷರು

## ಕಳೆದ ಐದು ವರ್ಷಗಳ ಸಂಘದ ಪ್ರಗತಿಯ ಪಕ್ಷಿ ನೋಟ

| ಕ್ರ.ಸಂ. | ವಿವರಗಳು | 2017–18 | 2018–19 | 2019–20 | 2020–21 | 2021–22 |
|---|---|---|---|---|---|---|
| 1. | ಸದಸ್ಯರ ಸಂಖ್ಯೆ | 1501 | 1593 | 1657 | 1716 | 1757 |
| 2. | ಷೇರು ಬಂಡವಾಳ | 35,21,500=00 | 44,48,500=00 | 54,90,500=00 | 73,18,100=00 | 85,93,852=00 |
| 3. | ಕಾಯ್ದಿಟ್ಟ ನಿಧಿ | 9,00,442=00 | 11,53,417=00 | 14,43,643=00 | 17,86,860=00 | 21,24,812=00 |
| 4. | ಠೇವಣಿಗಳು | 2,06,98,208=00 | 3,29,10,272=00 | 4,25,32,424=00 | 6,26,31,735=00 | 7,05,59,528=00 |
| 5. | ದುಡಿಯುವ ಬಂಡವಾಳ | 2,95,70,567=00 | 4,34,72,226=00 | 5,46,80,120=00 | 8,00,52,679=00 | 9,53,34,983=00 |
| 6. | ಇತರೆ ನಿಧಿ | 23,47,251=00 | 28,35,894=00 | 35,57,606=00 | 42,91,159=00 | 57,19,049=00 |
| 7. | ಸದಸ್ಯರಿಗೆ ಸಾಲಗಳು | 2,93,16,860=00 | 4,01,68,720=00 | 5,10,89,441=00 | 6,12,57,390=00 | 7,52,35,589=00 |
| 8. | ಲಾಭ | 9,10,229=00 | 9,73,697=00 | 11,00,880=00 | 12,53,506=00 | 14,30,350=85 |
| 9. | ಲಾಭಾಂಶ (ಡಿವಿಡೆಂಡ್) | 10% | 6% | 6% | 6% | 6% (ಉದ್ದೇಶಿತ) |
| 10. | ಆಡಿಟ್ ಶ್ರೇಣಿ | B | A | A | A | A |

## ಆಡಳಿತ ಮಂಡಳಿ ಸದಸ್ಯರು



ಹೆಚ್. ಹೆಚ್. ಜಯ್ಯಣ್ಣ
ಸಂಸ್ಥಾಪಕ ಅಧ್ಯಕ್ಷರು ಹಾಗೂ ನಿರ್ದೇಶಕರು



ಹೆಚ್.ಎಂ. ನಿಂಗಪ್ಪ
ನಿರ್ದೇಶಕರು



ಎಸ್. ಲಕ್ಷ್ಮಣ್
ನಿರ್ದೇಶಕರು



ಟಿ.ಹೆಚ್. ಗುಡ್ಡಪ್ಪ
ನಿರ್ದೇಶಕರು



ಹೆಚ್.ಡಿ. ಹೊನ್ನಪ್ಪ
ನಿರ್ದೇಶಕರು



ಸಿ.ಎಂ. ಹನುಮಂತಪ್ಪ
ನಿರ್ದೇಶಕರು



ಎನ್. ಕುಬೇರಪ್ಪ
ನಿರ್ದೇಶಕರು



ವೈ. ಹನುಮಂತಪ್ಪ
ನಿರ್ದೇಶಕರು



ಕೆ.ಬಿ. ಮುರುಡಪ್ಪ
ನಿರ್ದೇಶಕರು



ಇಂದ್ರಮ್ಮ ಗಾಳೇರ
ನಿರ್ದೇಶಕರು



ಪಿ.ಕೆ. ರಮೇಶ್ ಪಿಸಾಳೆ
ನಿರ್ದೇಶಕರು



ಎಲ್. ಯೋಗಿಶ್
ಕಾರ್ಯದರ್ಶಿ

ವಿಶೇಷ ಸೂಚನೆ : ಈಗಾಗಲೇ ಸರ್ವಸದಸ್ಯರಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದಿದ್ದವರು ಇದನ್ನೇ ಆಹ್ವಾನ ಎಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

ಮಾಸ್ಕ್, ಸ್ಯಾನಿಟೈಸರ್ ಬಳಸುವುದು ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಕಡ್ಡಾಯ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte